॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXXI No. 5 MARCH 2022 Pages 16 Rs. 2/-



Received a donation of Rs. 5,00,000/- from

## SMT. VEENA & SHRI SUBRAY HOSMANE

towards Women Welfare Cell

Forthcoming event :

**ANNUAL GENERAL BODY MEETING**

On Saturday, 26th March, 2022 | 2:30 p.m. onwards

at Havyakara Sabhagraha, Dipti Solitaire, Ghatkopar (W), Mumbai

"**Havyaka Sandesha**" is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** Smt. Shashikala Hegde
Smt. Tanuja Hegde
Shri Umesh Hegde
Smt. Shailaja Hegde

***Publisher*** : Narayan Akadas R.
Hon. Gen. Secretary

***Printed at*** : M/s. Navin Printers
Mumbai - 400 016.
✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2019-2020**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : Umesh Hegde
***Hon. Treasurer*** : A. G. Bhat

***Elected Members :***

Smt. Tanuja Hegde, A. K. Bhat
Smt. Shashikala Hegde, R. N. Kameshwar
Dr. Vivek Hebbar, Ramesh Vaidya
N. K. Hegde, Chidanand Bhagwat
Gautam Upadhya

***Co-opted Members :***
Umesh Maskeri, Shailaja Hegde

***Editorial***

# *Opening up*



*As on today, we are walking on the streets with less anxiety, bargaining in the market more freely and also feel good as the work culture is being shifted to offline from online. Many airlines also have now resumed operations to different destinations, which they earlier cancelled due to pandemic. As life is returning to normalcy and we are just waiting to take off our masks. There is an air of enthusiasm with the feeling that we are opening up.*

*At a time when wearing the mask is considered as appropriate behaviour life does not look normal. As people wearing mask in the public became a normal feature, we found it objectionable when someone did not wear it.*

*Most of the times we tend to behave in a way that is accepted by the society. No doubt, our surroundings, our belief system which has been evolved over years play a key role. Behavioral pattern changes from place to place and it may be also different for people residing in the same area but having different culture.*

*When we refer to someone as abnormal we only mean that he does not behave in the same way as most of the people do. However, he may be true to himself. If a person only does those things which are normally done by others, how can he realize his potentials? He may not fit into the common frame but may have other dimensions to his life. When someone allows the passion within to flow, it will find its own direction which may create marvels. There is no pattern for creativity and only when a person exhibits his individuality; the road to excellence is paved. Originality has no companion. It does not follow any precedents. Scientific discovery has also taken place in the world because someone could think differently. Uniformity is not the law of the universe.*

*Lata Mangeshkar, described as Gaana Saraswati, who touched our hearts with the melody of her voice, coming directly from her heart, created a void with her departure. Today we find it surprising to know that initially Lataji was not welcomed by music directors, because her voice was not in conformity with the then popular voices. However with her unique voice she created a phenomenon which could not be matched at all.*

*As we move on in this ever changing world, our priorities change and the behaviour which is described as normal also changes. Therefore, it is more important that our behaviour and action should be appropriate in the context of the present time. More importantly, we should not achieve our goal by crushing the aspiration of others. We open up in the real sense when our happiness also includes the happiness of others.*

Amita S Bhagwat

e-mail : amitabhagwat@gmail.com

*PAGE DONATED BY : **SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# ಮಾಸ ಮಹಾತ್ಮ್ಯ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

ಈ ಎಂಟು ಪ್ರಕಾರಗಳಲ್ಲಿ ಗಾಂಧರ್ವವೊಂದು ಮಾತ್ರ ವಧೂವರರು ಪ್ರೌಢರಿದ್ದ ಹೊರತು ಆಗಲಾರದು. ಉಳಿದವುಗಳಿಗೆ ಅಂಥ ನಿರ್ಬಂಧವು ಅವಶ್ಯ ತೋರುವದಿಲ್ಲ. ಈ ಗಾಂಧರ್ವ ಪದ್ಧತಿಯು ಕ್ಷತ್ರಿಯರಿಗೆ ಉಕ್ತವಾಗಿದೆ. ಶಾಸ್ತ್ರಕಾರರು ವಧುವಿನ ವಯಸ್ಸನ್ನು ನಿರ್ಣಯಿಸುವಾಗ ಸಾಮಾನ್ಯವಾಗಿ ಐದರಿಂದ ಎಂಟುವರ್ಷದೊಳಗಿನ ವಯಸ್ಸು ಉಚಿತವಾದ್ದೆಂದೂ, ಒಂಬತ್ತು, ಹತ್ತು ವರ್ಷಗಳು ಮಧ್ಯಮವೆಂದೂ, ಹನ್ನೊಂದನೇ ವರ್ಷವು ಅಧಮವೆಂದೂ, ಹನ್ನೆರಡನೇ ವರ್ಷವು ಪ್ರಾಯಶ್ಚಿತ್ತಾರ್ಹವೆಂದೂ ಹೇಳಿದ್ದಾರೆ. ಪ್ರಾಚೀನಕಾಲದಲ್ಲಿ ಪ್ರೌಢವಿವಾಹವೇ ಪ್ರಚಾರದಲ್ಲಿದ್ದದ್ದಾದರೆ ಶಾಸ್ತ್ರಕಾರರು ಇಂಥ ನಿರ್ಬಂಧ ಮಾಡಿದ್ದರ ಕಾರಣವೇನೆಂಬದನ್ನು ತರ್ಕಿಸುವದು ಅಸಾಧ್ಯವಾಗಿದೆ; ಹಾಗೂ ಪ್ರಾಚೀನಕಾಲದಲ್ಲಿ ಪ್ರಚಾರದಲ್ಲಿದ್ದ ಆ ಪ್ರೌಢ ವಿವಾಹವು ನಿಂತುಹೋಗಿ ಈಗಿನ ಬಾಲ್ಯವಿವಾಹವು ರೂಢವಾದ ಕಾರಣವಾಗಲಿ, ನಿಯಮಿತ ಕಾಲವಾಗಲಿ ತಿಳಿಯುವದಿಲ್ಲ. ಕೆಲವರು ಮುಸಲ್ಮಾನರ ಆಳಿಕೆಯ ಪ್ರಾಬಲ್ಯದಲ್ಲಿ ಬಾಲಿಕೆಯರನ್ನು ಕಾದುಕೊಳ್ಳುವದು ಕಠಿಣವಾಗುತ್ತಿದ್ದುದ್ದರಿಂದ ಅವರನ್ನು ಆದಷ್ಟು ಬೇಗನೆ ಮತ್ತೊಬ್ಬನ ಸ್ವಾಧೀನ ಮಾಡಹತ್ತಿದ್ದರಿಂದ ಬಾಲ್ಯವಿವಾಹವು ಪ್ರಚಾರದಲ್ಲಿ ಬಂತೆಂದು ತರ್ಕಿಸುತ್ತಾರೆ. ಆದರೆ ಈ ತರ್ಕವು ನಿರಾಧಾರವಾದದ್ದು. ಪ್ರಬಲ ಮುಸಲ್ಮಾನರಿಗೆ ವಿವಾಹಿತರಾದ ಕನ್ಯೆಯರನ್ನು ಒಯ್ಯಲಿಕ್ಕೆ ಪ್ರತಿಬಂಧವಿರುವದು ಶಕ್ಯವೇ ಇಲ್ಲ. ಇಷ್ಟಾಗಿ ಸ್ಮೃತಿಕಾರರು ಮುಸಲ್ಮಾನರ ಆಳಿಕೆಯ ತರುವಾಯದವರಲ್ಲ.

ಪ್ರಾಚೀನ ಗ್ರಂಥಗಳಲ್ಲಿ ಸ್ವಯಂವರಗಳ ವರ್ಣನೆಯನ್ನು ನೋಡಿದರೆ ವಧುವು ಪ್ರೌಢಳಾಗಿರುತ್ತಿದ್ದಳೆಂದು ಕಂಡುಬರುತ್ತದೆ. ಆದರೆ ಅವಳು ಹನ್ನೆರಡು ವರ್ಷಕ್ಕೂ ಮೀರಿದ ವಯಸ್ಕಳಾಗುತ್ತಿದ್ದಳೆಂದು ನಿರ್ಧರಿಸಲಿಕ್ಕೆ ಸಬಲ ಆಧಾರವು ದೊರೆಯಲಾರದು. ಈ ಸ್ವಯಂವರವಾದರೂ ಕ್ಷತ್ರಿಯರಲ್ಲೇ ಆಗುತ್ತಿತ್ತು. ಈ ಎಲ್ಲ ಸಂಗತಿಗಳ ಮೇಲಿಂದ ಪ್ರಾಚೀನಕಾಲದಲ್ಲಾದರೂ ಬಾಲ್ಯವಿವಾಹವೇ ಯುಕ್ತವೆಂದು ತಿಳಿಯಲ್ಪಡುತ್ತಿತ್ತೆಂದೂ, ಇಂಥ ವಿವಾಹಗಳನ್ನು ಸೀತಾ, ದ್ರೌಪದಿಗಳ ವಿವಾಹದಂತೆ ಯಾವದೊಂದು ಪಣದಿಂದ ಪರೀಕ್ಷಿಸಿ ಮಾಡುತ್ತಿದ್ದರೆಂದೂ ಒಳ್ಳೇ ಜಾಣರಾದ ಹುಡುಗಿಯರ ಸಲುವಾಗಿ ಕ್ಷತ್ರಿಯರಲ್ಲಿ ಪ್ರೌಢ ವಿವಾಹವೂ ನಡೆಯುತ್ತಿದ್ದು ಅದಕ್ಕೂ ಮನ್ನಣೆಯಿತ್ತೆಂದೂ ಅನುಮಾನಿಸಿದರೆ ತಪ್ಪಾಗಲಿಕ್ಕಿಲ್ಲ.

ಬರೇ ಪ್ರೌಢ ವಿವಾಹವು ಸದೃಢ ಪ್ರಜೋತ್ಪತ್ತಿಗೆ ಕಾರಣವೆಂದು ಊಹಿಸುವುದು ಯುಕ್ತವಲ್ಲ. ಈಗಿನ ತರುಣ-ತರುಣಿಯರು ಬ್ರಹ್ಮಚರ್ಯದ ಮಹತ್ವವನ್ನೂ, ಸ್ತ್ರೀಪುರುಷ ಸಂಬಂಧಕ್ಕೆ ಬರೇ ಕಾಮವಾಸನಾ ತೃಪ್ತಿಯೊಂದೇ ಫಲವಲ್ಲೆಂಬದನ್ನೂ ತಿಳಿದು ಶಾಸ್ತ್ರದಲ್ಲಿ ಶ್ರದ್ಧೆಯುಳ್ಳವರಾಗಿ ವರ್ತಿಸಿದರೆ ಮಾತ್ರ ಉತ್ತಮ ಪ್ರಜೆಯು ಸಹಜವಾಗಿಯೇ ಉಂಟಾಗುವುದು. ಆದರೆ ಈಗಿನ ಪರಿಸ್ಥಿತಿಯು ತೀರ ಪ್ರತಿಕೂಲವಾಗಿದೆ. ಈಗಿನ ಶಿಕ್ಷಣ ಸಂಸ್ಥೆಗಳಲ್ಲಿ ನೀತಿಗೂ, ಧರ್ಮಕ್ಕೂ ಪ್ರಾಧಾನ್ಯವು ತೀರ ಕಡಿಮೆ. ಪೂರ್ವದ ಗುರುಕುಲದಂಥ ವ್ಯವಸ್ಥೆಯು ಇಲ್ಲದಂತಾಗಿದೆ. ಶಿಕ್ಷಣ ಪಡೆಯುತ್ತಿರುವ ತರುಣ-ತರುಣಿಯರು ಪಾಶ್ಚಾತ್ಯ ರೀತಿ ರಿವಾಜುಗಳಿಗೆ ಮರುಳಾಗಿ ವ್ಯಕ್ತಿ ಸ್ವಾತಂತ್ರ್ಯ, ಪ್ರೌಢ ವಿವಾಹಗಳೆಂದು ಬಾಯಲ್ಲಿ ಒದರುತ್ತಿದ್ದರೂ ಆತ್ಮ ಸಂಯಮವಿಲ್ಲದೆ ತಮ್ಮ ಅತಿ ಕೋಮಲ ವಯಸ್ಸಿನಲ್ಲೇ ಹಲವು ತರದ ದುರ್ವ್ಯಸನಗಳಿಗೊಳಗಾಗಿ ತಮ್ಮ ಶಕ್ತಿಯನ್ನೇ ಕಳಕೊಳ್ಳುತ್ತಿರುವರು. ಇಂಥವರಲ್ಲಿ ಬರೇ ಪ್ರೌಢವಿವಾಹ ಮಾತ್ರದಿಂದ ತೇಜಸ್ವೀ ಪ್ರಜೋತ್ಪತ್ತಿಯಾದೀತೆಂದು ತಿಳಿಯುವುದು ಯುಕ್ತವಲ್ಲ. ತರುಣ-ತರುಣಿಯರ ಮನಸ್ಸು ಉದಾತ್ತ ವಿಚಾರದಿಂದ ತುಂಬಿ ಸುಸಂಸ್ಕೃತವಾದ ಹೊರತು ಭಾವೀ ಪೀಳಿಗೆಯು ನವಚೈತನ್ಯವುಳ್ಳದ್ದಾಗುವ ಸಂಭವವೇ ಇಲ್ಲ.



ಸತತವಾದ ಸಹವಾಸದಿಂದಲೂ, ತದೇಕ ನಿಷ್ಠೆಯಿಂದಲೂ ಪರಸ್ಪರ ಪ್ರೀತಿ-ಮೈತ್ರೀ-ಭಕ್ತಿಗಳು ದೃಢವಾಗುವವು. ಪಾತಿವ್ರತ್ಯವೂ, ಏಕಪತ್ನೀವ್ರತವೂ ಪರಮ ಪೂಜ್ಯವಾದ್ದೆಂದೆದೆಣಿಸುವ ನಮ್ಮ ಹಿಂದೂ ಸಮಾಜವು ಇಂಥ ಪ್ರೀತಿಯನ್ನುಂಟು ಮಾಡಬೇಕಾದರೆ ಬಾಲ್ಯದಿಂದಲೇ ಅವರಿಬ್ಬರಲ್ಲಿ ಪತಿ ಪತ್ನೀ ಭಾವವನ್ನುಂಟು ಮಾಡುವುದು ಹೆಚ್ಚು ಶ್ರೇಯಸ್ಕರವಾದೀತು. ಆದರೆ ವಧೂವರರ ಪ್ರಕೃತಿ ಸ್ವಭಾವಾದಿಗಳನ್ನು ದುರ್ಲಕ್ಷಿಸಿ ಪಾಲಕರು ತಾವು ವಯಸ್ಸಿನಿಂದ ಪ್ರೌಢರಾಗಿದ್ದರೂ ವರದಕ್ಷಿಣೆ ಕನ್ಯಾಶುಲ್ಕಾದಿಗಳ ಮೋಹಕ್ಕೊಳಗಾಗಿ ತಮ್ಮ ಮಕ್ಕಳ ವಿವಾಹ ವಿಷಯದಲ್ಲಿ ಬಾಲಬುದ್ಧಿಯವರಾಗುವುದು ಅತ್ಯಂತ ಗರ್ಹ್ಯವಾದದ್ದು.

ವಧೂವರರ ಪ್ರೌಢತೆಯನ್ನು ವಯೋಮಾನದಿಂದ ನಿಶ್ಚಯಿಸುವುದೆಂದರೆ ಅವರ ವ್ಯಕ್ತಿ ಸ್ವಾತಂತ್ರ್ಯವನ್ನು ಕಾಯಬೇಕೆಂದು ಅಭಿಪ್ರಾಯಪಟ್ಟಂತೆ ಆಗುತ್ತದೆ. ಆದರೆ ಸಾಂಸಾರಿಕ ಸುಖದುಃಖಗಳ ಅನುಭವ ಹೊಂದಿದ ಪಾಲಕರೇ ದುಡ್ಡಿನ ಮೋಹಕ್ಕೆ ಬಿದ್ದು ತಮ್ಮ ಮಕ್ಕಳ ಭಾವೀ ಅನರ್ಥಕ್ಕೆ ಕಾರಣರಾಗುವ ಉದಾಹರಣೆಗಳು ಹಲವು ಸಿಗುತ್ತವೆ; ಅಂದ ಮೇಲೆ ಇನ್ನೂ ಅಪಕ್ವಬುದ್ಧಿ ಸಂಸ್ಕಾರವುಳ್ಳ ಹದಿನೆಂಟು ಇಪ್ಪತ್ತು ವರ್ಷದ ತರುಣ ತರುಣಿಯರು ಬರೇ ಅರ್ಥ, ಕಾಮಗಳಿಗೆ ವಶರಾಗಿ ವಿವಾಹ ಸಂಬಂಧ ಮಾಡಿಕೊಂಡರೆಂದರೆ ಅದು ಇನ್ನಷ್ಟು ಅನರ್ಥಕಾರಿ ಯಾಗುವ ಸಂಭವವಿರುತ್ತದೆ. ಪ್ರೌಢ ವಿವಾಹದಿಂದೊದಗಿ ಬರುವ ಅನರ್ಥಗಳನ್ನೆಲ್ಲ ದೂರಪಡಿಸಿಕೊಳ್ಳುವುದಕ್ಕಾಗಿ ಪಾಶ್ಚಾತ್ಯದೇಶಗಳಂತೆ ವಿವಾಹದಲ್ಲಿ ಸ್ತ್ರೀಸ್ವಾತಂತ್ರ್ಯವನ್ನೂ, ಪುನರ್ವಿವಾಹ ಸ್ವಾತಂತ್ರ್ಯವನ್ನೂ ಪ್ರಚಾರದಲ್ಲಿ ತರಲೇಬೇಕಾಗುವುದು. ಇಷ್ಟೇ ಅಲ್ಲ, ಈಗಿನ ಪರಿಸ್ಥಿತಿಯಿಂದ ವರ್ಣಸಾಂಕರ್ಯವನ್ನೂ ಒಡಂಬಡುವ ಪ್ರಸಂಗವು ತಾನಾಗಿ ಬರುವುದು. ಒಟ್ಟಿನ ಮೇಲೆ ಬರೇ ಪ್ರೌಢವಿವಾಹದಿಂದ ಸಮಾಜದ ಏಳ್ಗೆಯಾಗುವುದೆಂದು ತಿಳಿಯುವುದು ಕೇವಲ ಆಭಾಸವಾಗಿದೆ. ಈಗಾಗುತ್ತಿರುವ ಅನರ್ಥಗಳಿಗೆಲ್ಲ ನಿಜವಾದ ಧರ್ಮ, ನೀತಿಗಳ ಶಿಕ್ಷಣದ ಅಭಾವವು ಕಾರಣವೇ ಹೊರತು ಬಾಲ್ಯವಿವಾಹವೆಂದೂ ಅಲ್ಲ. ಆದ್ದರಿಂದ ಪಾಲಕರು ಬಾಲ-ಬಾಲಕಿಯರ ಶಿಕ್ಷಣದ ಕಡೆಗೇ ವಿಶೇಷ ಲಕ್ಷ್ಯ ಕೊಡುವುದು ಹೆಚ್ಚು ಯುಕ್ತವಾದದ್ದೆಂದು ನಮ್ಮ ಅಭಿಪ್ರಾಯವು.

ಜ್ಯೇಷ್ಠ ಶು. 15 ದಿನ ಜ್ಯೇಷ್ಠಾ ನಕ್ಷತ್ರದಲ್ಲಿ ಬೃಹಸ್ಪತಿ ಚಂದ್ರರೂ, ರೋಹಿಣೀ ನಕ್ಷತ್ರದಲ್ಲಿ ಸೂರ್ಯನೂ ಇದ್ದರೆ ಆ ದಿನಕ್ಕೆ 'ಮಹಾಜ್ಯೇಷ್ಠಾ ಯೋಗ'ವೆಂದೂ ಈ ದಿನ ಸ್ನಾನದಾನಾದಿ ಪುಣ್ಯಕರ್ಮಗಳನ್ನು ಮಾಡಬೇಕೆಂದೂ ಹೇಳಿದೆ.

*(ಮುಂದುವರಿಯುವುದು)*

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

# ಮೇಘದೂತವನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಮೇಘದೂತ : ಪ್ರೊ. ಅ. ರಾ. ಮಿತ್ರ :** ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಗ್ರಂಥಗಳನ್ನು ನೀಡಿರುವ ಹಿರಿಯ ವಿದ್ವಾಂಸರೂ, ಖ್ಯಾತ ಲೇಖಕರೂ ಆದ ಪ್ರೊ. ಅ. ರಾ. ಮಿತ್ರ ಅವರು ಕಾಳಿದಾಸನ ಮೇಘದೂತವನ್ನು ಭಾಮಿನಿ ಷಟ್ಪದಿಯಲ್ಲಿ ಅನುವಾದಿಸಿದ್ದಾರೆ. ಭಾಷೆ ಸರಳವೂ ಸುಂದರವೂ ಆಗಿದ್ದು ಹೊಸಗನ್ನಡ ಶೈಲಿಯಲ್ಲಿದೆ. ನೂರಿಪ್ಪತ್ತೈದು ಪುಟಗಳ ಈ ಹೊತ್ತಿಗೆಯು ಪೂರ್ವಮೇಘ ಹಾಗೂ ಉತ್ತರಮೇಘವೆಂದು ವಿಭಾಗಿಸಲ್ಪಟ್ಟಿದೆ. ಪದ್ಯಾನುವಾದದ ಜೊತೆಯಲ್ಲಿ ಅಧ್ಯಯನಪೂರ್ಣವಾದ ಟಿಪ್ಪಣಿಯನ್ನು ಪ್ರತ್ಯೇಕ ವಿಭಾಗಗಳಲ್ಲಿ ನೀಡಲಾಗಿದೆ. ಪ್ರಸಿದ್ಧ ಮಲ್ಲಿನಾಥನ ವ್ಯಾಖ್ಯಾನವನ್ನು ಒಳಗೊಂಡು ಹಲವು ವ್ಯಾಖ್ಯಾನಗಳ ಸಾರರೂಪವೇ ಈ ಟಿಪ್ಪಣಿಯಾಗಿದೆ. ಅಧ್ಯಯನಶೀಲರಿಗೆ ಇದೊಂದು ದಾರಿದೀಪ ವಾಗುವುದರಲ್ಲಿ ಸಂಶಯವಿಲ್ಲ. ಹಾಗೆಯೇ ಸಂಸ್ಕೃತದ ಅಕಾರಾದಿ ಮತ್ತು ಕನ್ನಡ ಪದ್ಯಗಳ ಅಕಾರಾದಿ ಅಂಶಗಳನ್ನೂ ಹೊತ್ತಿಗೆಯಲ್ಲಿ ಉಲ್ಲೇಖಿಸಲಾಗಿದೆ.

ಅ. ರಾ. ಮಿತ್ರ ಅವರ ಮೇಘದೂತ ಅನುವಾದ ಕೃತಿ 2012ರಲ್ಲಿ ಪ್ರಕಟಗೊಂಡಿತು. ಪ್ರಾರಂಭದಲ್ಲಿ ಶಕ್ತಿ ದೇವತೆಯ ಸ್ತುತಿಯನ್ನು ಹೊಂದಿದ ಇದರಲ್ಲಿ ಸಾಹಿತ್ಯ ನುಡಿ ಸಂಪತ್ತಿಯನ್ನು ದಯಪಾಲಿಸು ಎಂಬ ಪ್ರಾರ್ಥನೆ ಇದೆ.

ಶಕ್ತಿದೇವತೆ, ಕಾಳಿದಾಸನು  
ಭಕ್ತಿಯಿಂ ನಿನ್ನೊಲವ ಯಾಚಿಸೆ  
ಉಕ್ತಿ ಸಾಮರ್ಥ್ಯವನು ವರ್ಷಿಸಿ ಪೊರೆದ ಮಹದೇವಿ  
ರಕ್ತೆದೋರುತ ಜಗವನತ್ಯಾ  
ಸಕ್ತಿಯಿಂ ಸಾಹಿತ್ಯ ನುಡಿ ಸಂ  
ಪತ್ತಿ ಮಂತ್ರವ ಬರೆದು ನಾಲಗೆ ಶುದ್ಧಗೊಳಿಸುತಿರು

ಕಾಳಿದಾಸನಿಗೆ ಕಾಳಿದೇವತೆ ಒಲಿದು ಪ್ರತ್ಯಕ್ಷಳಾಗಿ ನಾಲಿಗೆಯ ಮೇಲೆ ಬೀಜಾಕ್ಷರವನ್ನು ಕೊರೆದಳೆಂಬ ಕಥೆ ಬಹು ಹಿಂದಿನಿಂದಲೂ ಪ್ರಚಲಿತವಿದೆ. ಆ ಕಥೆಯನ್ನು ಆಧಾರವಾಗಿಟ್ಟುಕೊಂಡು, ಕಾಳಿದಾಸನಿಗೆ ಉಕ್ತಿ ಸಾಮರ್ಥ್ಯವನ್ನು ದಯಪಾಲಿಸಿದ ಮಹದೇವಿ ಸಾಹಿತ್ಯ ನುಡಿ ಸಂಪತ್ತಿ ಮಂತ್ರವನ್ನು ಬರೆದು ತನ್ನ ನಾಲಿಗೆಯನ್ನು ಸದಾ ಶುದ್ಧಿಗೊಳಿಸುತ್ತಿರಬೇಕೆಂದು ಕವಿ ಪ್ರಾರ್ಥಿಸುತ್ತಾರೆ. ಈ ಪ್ರಾರ್ಥನೆಯು ಮುಂದಿನ ಪದ್ಯದಲ್ಲಿ ಸಾರ್ವತ್ರಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ಮೇಘದೂತನೆ ಮಳೆಯ ಕರೆದಾ-  
ಗಾಗ ಮಣ್ಣಲಿ ಜೀವ ತುಂಬುತ  
ಸಾಗುವಳಿಯಲಿ ಲೋಕ ಕಲ್ಯಾಣಕ್ಕಾಗಿ ನೆರವಾಗಿ  
ಸಾಗಿ ದೇಶದಲ್ಲೆಲ್ಲ ಗೆಳೆಯನಿ-  
ಗಾಗಿ ಯಕ್ಷಿಯ ಜೀವವುಳಿಸುವ  
ಯೋಗಿವಂದ್ಯನೆ ನೊಂದ ಜೀವಕೆ ಸಾರು ಮಂಗಳವ



ಇಲ್ಲಿ ಕವಿ ಮೇಘವನ್ನು 'ಯೋಗಿವಂದ್ಯನೆ' ಎಂದು ಸಂಬೋಧಿಸುತ್ತಾರೆ. ಕೃಷಿ ಪ್ರಧಾನವಾದ ಭಾರತದಲ್ಲಿ ಮೇಘವನ್ನು ಯೋಗಿವಂದ್ಯ ಎಂದು ಸಂಬೋಧಿಸಿರುವುದು ಔಚಿತ್ಯಪೂರ್ಣವಾಗಿದೆ. ಸಕಾಲದಲ್ಲಿ ಮಳೆಸುರಿದು, ಬೆಳೆಗಳು ಸಮೃದ್ಧವಾಗಿ ಲೋಕಕಲ್ಯಾಣವುಂಟಾಗಲು, ಬಿಸಿಲಿನ ತಾಪದಿಂದ ಹಸಿವಿನ ಬೇಗೆಯಿಂದ ನೊಂದ ಜೀವಿಗಳಿಗೆ ಸಾಂತ್ವನ ದೊರೆಯುವಂತಾಗಲಿ ಎಂಬ ಕವಿಯ ಸದಾಶಯ ಈ ಪದ್ಯದಲ್ಲಿ ವ್ಯಕ್ತವಾಗಿದೆ.

ಅ. ರಾ. ಮಿತ್ರ ಅವರು ತಮ್ಮ ಕಾವ್ಯಾನುವಾದಕ್ಕೆ ಪ್ರಧಾನವಾಗಿ ಭಾಮಿನಿ ಷಟ್ಪದಿಯನ್ನು ಆಯ್ದು ಕೊಂಡಿದ್ದಾರೆ. "ಭಾಮಿನಿಯು ದೀರ್ಘ ಕಾವ್ಯಗಳಿಗೆ ಸರಿಹೋಗತಕ್ಕ ಛಂದೋಬಂಧ. ಭಾಮಿನಿ ಷಟ್ಪದಿಯ ನಡೆ ಬೆಡಗಿನ ನಡೆ. ಅದರ ಗತಿ ಸಾವಧಾನ. ಅದರ ವ್ಯಾಪ್ತಿ ವಾರ್ಧಕ ಷಟ್ಪದಿಗಿಂತಲೂ ಕಿರಿದಾಗಿದ್ದರೂ ಅದರ ನಡೆಯಲ್ಲಿ ಭಾವವು ಪಡಿನುಡಿಯಬಲ್ಲದು, ಕಥೆ ಮುಂದುವರಿಯಬಲ್ಲದು. ಆದುದರಿಂದಲೇ ಕೆಲವೊಂದು ಉತ್ಕೃಷ್ಟ ಕನ್ನಡ ಕಾವ್ಯಗಳು ಭಾಮಿನಿಯಲ್ಲಿ ರಚಿತವಾಗಿವೆ. ಪ್ರಭುಲಿಂಗಲೀಲೆ ಮತ್ತು ಕುಮಾರವ್ಯಾಸ ಭಾರತಗಳನ್ನು ಅವುಗಳಲ್ಲಿ ಪ್ರಾಮುಖ್ಯವಾಗಿ ಹೆಸರಿಸಬಹುದು. ಭಾರತ ವಾಚನವು ಲೋಕಪ್ರಿಯವಾಗಿರುವುದಕ್ಕೆ ಅದರ ಛಂದೋಬಂಧವಾದ ಭಾಮಿನೀ ಷಟ್ಪದಿಯೂ ಒಂದಿಷ್ಟು ಕಾರಣ" ಎಂದು ಡಿ. ಎಸ್. ಕರ್ಕಿಯವರು ಭಾಮಿನಿ ಷಟ್ಪದಿಯ ಕುರಿತು ನುಡಿಯುತ್ತಾರೆ.

ಭಾಮಿನಿ ಷಟ್ಪದಿಯ ಲಕ್ಷಣಕ್ಕನುಗುಣವಾಗಿಯೇ, ಅ. ರಾ. ಮಿತ್ರ ಅವರ ಕಾವ್ಯದ ಪದ್ಯಗಳು ಬೆಡಗಿನ ನಡೆಯಿಂದ ಕೂಡಿವೆ. ಪ್ರತಿಯೊಂದು ಪದ್ಯವೂ ಸೊಗಸಾದ ಆದಿಪ್ರಾಸವನ್ನು ಹೊಂದಿದೆ. ಮುಂದಿನ ಪದ್ಯ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ಅಲ್ಲೆ ಧನಪತಿಗೃಹಕೆ ಬಡಗಣ  
ದಲ್ಲೆ ನಮ್ಮ ನಿವಾಸ ಕಾಮನ  
ಬಿಲ್ಲಿನಂದದಿ ಬಾಗಿ ನಿಂತಿಹ ದಾರವಟ್ಟವಿದೆ  
ನಲ್ಲೆ ಸಾಕಿದ ಮಗನೊ ಪೇಳೆನೆ  
ಚೆಲ್ಲಿ ಸೂಸುವ ಪುಷ್ಪ ಸಂಭ್ರಮ  
ದಲ್ಲಿ ಕೈಗಳಿಗೆಟಕುವೊಲು ಮಂದಾರ ತರುವಿಹುದು ॥ (ಉ.ಮೇ.15)

ಮೂಲ ಕಾವ್ಯದ ಶಬ್ದಗಳಿಗೆ ಕನ್ನಡದ ಪರ್ಯಾಯ ಪದಗಳನ್ನು ಜೋಡಿಸುವ ಸಂದರ್ಭಗಳಲ್ಲೂ ಅ. ರಾ. ಮಿತ್ರ ಅವರ ಪಾಂಡಿತ್ಯವನ್ನು ಗುರುತಿಸಬಹುದು. ಕೃಷಿ ಫಲಗಳಿಗೆ ನೀರೆರೆದು ಸಮೃದ್ಧಿಯನ್ನುಂಟು ಮಾಡುವಂತೆ ಮೇಘದೊಡನೆ ಕೇಳಿಕೊಳ್ಳುವಾಗ ಮೂಲ ಪದ್ಯದಲ್ಲಿಲ್ಲದಿದ್ದರೂ 'ಎಲೆ ಜಲದ' ಎಂದು ಸಂಬೋಧಿಸಿರುವುದು, 'ತಸ್ಮಿನ್ವನಚರವಧೂ' ಎಂಬಲ್ಲಿ 'ಕಾಡರಮಣಿ' ಎಂದೂ, 'ಸ್ಥಲಕಮಲಿನೀಂ ನ ಪ್ರಬುದ್ಧಾಂ ನ ಸುಪ್ತಾಂ' ಎಂಬುದನ್ನು 'ಬಿರಿಯದೆ ಮುಚ್ಚಲಾಗದೆ' ಎಂದೂ, 'ಉಪವನವೃತರ್ಯಾ ಕೇತಕೈಸ್ಸೂಚಿಭಿನ್ನೈಃ' ಎಂಬುದನ್ನು

PAGE DONATED BY : SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR

# The Essence of Bhagavad-Gita

✍ **Shraddha Hegde** **(BE-Engg)**



**Vishwa-Roopa Darshana Yoga :** To nurture Arjuna's devotion, Shree Krishna had described his Divine opulences in the last chapter. Krishna's all-pervading energies were only the speck of his infinite divine powers which made Arjuna curious to know the true form. Having heard all the spiritual knowledge, illusion is now dispelled and he requests Krishna to view the infinite cosmic form only if he is good enough. Then, Hrishikesha grants divine vision, without any limitation of space, time and human perspective to show his infinite-form.

Sanjaya explained to Dhritarashtra that Krishna showed Arjuna the highest form with numerous eyes, limbs, unlimited faces, weapons, garments with thousands of suns radiating together in the sky. He could see all Gods including Brahma, sages and serpents who were praising the Lord. He saw the whole universe together contained in one form. The Rudras, Adityas, Vasus, Gandharavas, Ashwini kumars and Maruts were all beholding him. Arjuna saw all the sons of Dhritarashtra including Bhishma, Dronacharya and Karna enter into Krishna's mouth and getting crushed under his teeth just like moths flying to death in fire. Catching the sight of this divine form made Arjuna wonder-struck, also petrified by this appearance he bowed his hands before the Lord. Krishna proclaimed that he is the creator and destructor of the whole world. Regardless of Arjuna's presence, the outcome was pre-decided. Arjuna must fight for his honour and kingdom since his enemies were already destroyed and Arjuna was a mere instrument. Arjuna pleaded mercy for any offence or disrespect he may have committed in ignorance and asked Krishna to come back to his previous pleasing form. He had showed his highest form, all-knowing, all-pervading and endless which even greatest sages and devotees are unable to get. The only way to perceive him is with utmost devotion.

*(To be continued...)*

---

‘ಬೇಲಿಯುಲಿ ಮುಳ್ಳೊಡೆದು ಬೆಳ್ನಗೆಯಾಳುವವು’ ಎಂದೂ ಅನುವಾದಿಸಿದ್ದಾರೆ. ಅದೇ ರೀತಿ, ನಿನಗೆ ವಿದ್ಯುತ್ತಿನೊಡನೆ ಎಂದೂ ಅಗಲಿಕೆ ಬಾರದಿರಲಿ ಎಂಬ ಆಶಯವುಳ್ಳ ಕೊನೆಯ ಶ್ಲೋಕದಲ್ಲಿ ‘ಮಳೆಸಿರಿಯ ಜಲವಾಹ ಬೇಡವೊ ಮಿಂಚು ಹೆಣ್ಣಿನ ವಿರಹ ನಿನಗೆಂದೂ’ ಎಂದು ಮೂಲ ‘ಜಲದ’ ಶಬ್ದಕ್ಕೆ ಪ್ರತಿಯಾಗಿ ‘ಜಲವಾಹ’ ಎಂಬ ಪದಪ್ರಯೋಗ ಕಾವ್ಯಕ್ಕೆ ಪುಷ್ಟಿಯನ್ನು ನೀಡಿದೆ. ಉಪಮೆ, ಉತ್ಪ್ರೇಕ್ಷಾಲಂಕಾರ, ಅರ್ಥಾಂತರನ್ಯಾಸಗಳಲ್ಲೂ ಅ. ರಾ. ಮಿತ್ರ ಅವರ ಅನುವಾದ ಸಮುಚಿತವಾಗಿ ಮೂಡಿಬಂದಿದೆ.

ಉದಾ : ಉಪಮಾಲಂಕಾರ, ‘ಭಕ್ತಿಚ್ಛೇದೈರಿವ ವಿರಚಿತಾಂ ಭೂತಿಮಂಗೇ ಗಜಸ್ಯ’-‘ಸೀಳ್ಗಳಲೋಡಿ ಕಾಂಬಳು ಆನೆಯಂಗದಿ ಬರೆದ ಚಿತ್ರದೊಲು’ (ಉ.ಮೇ.16)

ಉತ್ಪ್ರೇಕ್ಷಾಲಂಕಾರ, ‘ರಾಶೀಭೂತಃ ಪ್ರತಿದಿನಮಿವ ತ್ರ್ಯಂಬಕ ಸ್ಯಾಟ್ಟಹಾಸಃ’ - ‘ಮಿಗೆ ತೀವೆ ಮೊತ್ತಂಗೊಂಡವೊಲು ಶಿವನಟ್ಟಹಾಸವದು’ (ಉ.ಮೇ.61)

ಅರ್ಥಾಂತರನ್ಯಾಸ, ‘ಪ್ರತ್ಯುಕ್ತಂ ಹಿ ಪ್ರಣಯಿಷು ಸತಾಮೀಪ್ಸಿತಾರ್ಥಕ್ರಿಯೈವ’ - ಒತ್ತಿಕೇಳ್ವವರಿಷ್ಟಸಿದ್ಧಿಯೆ ಸುಜನರುತ್ತರವು’ (ಉ.ಮೇ.58)

“ಮೇಘದೂತ ಒಬ್ಬ ವಿರಹಿಯ ಆಲಾಪದ ಕಥನ. ಒಬ್ಬ ಶಪಿತ ಯಕ್ಷನ ವಿರಹ ವೇದನೆಯನ್ನು ಮೂಲ ಶೃತಿಯಲ್ಲಿ ಇರಿಸಿಕೊಂಡ ಕಾವ್ಯ. ಇದನ್ನು ನೆಪ ಮಾಡಿಕೊಂಡು ಕಾಳಿದಾಸನು ಮನುಷ್ಯರ, ದೇವರುಗಳ, ರಾಕ್ಷಸರ, ನದಿ-ತೊರೆಗಳ, ಬೆಟ್ಟ-ಗುಡ್ಡಗಳ, ಕಾಲಮಾನಗಳ, ಚಳಿ ಗಾಳಿ ಬಿಸಿಲುಗಳ, ಇತಿಹಾಸಗಳ, ಭೂವಿವರಗಳ ಸೀಮೆಯಲ್ಲಿ ನಮ್ಮನ್ನು ಸುತ್ತಿಸುತ್ತಾನೆ. ಮಣ್ಣಿನ ಕಂಪು, ಗ್ರಾಮೀಣ ಸ್ತ್ರೀಯರ ಮುಗ್ಧತೆ, ನಾಗರಿಕ ಪ್ರೇಮಾಟ್ಟಹಾಸ, ಪುಷ್ಪಗಳ ವಿಲಾಸದ ಕಥನದೊಂದಿಗೆ ಇತಿಹಾಸ ಪುರಾಣದ ಕಥನಗಳನ್ನೂ ಇಲ್ಲಿ ಒಳಬೆರೆಸಿದ್ದಾನೆ. ಇಂಥ ಹಲವಾರು ಕಾರಣಗಳಿಂದ ನನಗೆ ಅದನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ಹುಚ್ಚು ಹಿಡಿಯಿತು” ಎಂದು ಅ. ರಾ. ಮಿತ್ರ ಅವರು ಕಾಳಿದಾಸನ ಮೇಘದೂತ ಕಾವ್ಯದ ಹಿರಿಮೆಯನ್ನು ವರ್ಣಿಸಿದ್ದಾರೆ. ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾಗಿ, ನಿವೃತ್ತರಾದ ಪ್ರೊ. ಅ. ರಾ. ಮಿತ್ರ ಅವರು ಕನ್ನಡ ಸಾಹಿತ್ಯವನ್ನು ಕುರಿತು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ನೂರಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ. ಇವರ ವಿದ್ವತ್ಪೂರ್ಣ ಪ್ರತಿಭೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೆಂಪೆಗೌಡ ಪ್ರಶಸ್ತಿ, ಅ.ನ.ಕೃ ಪ್ರಶಸ್ತಿ ಮೊದಲಾದ ಪುರಸ್ಕಾರಗಳು ಸಂದಿವೆ.

*(ಮುಂದುವರಿಯುವುದು)*

*PAGE DONATED BY :* ***SHRI N. R. HEGDE, DOMBIVLI***

# ಮೃಗನಯನಾ

✍ ಡಾ. ಜಯಂತ ಕಾಯ್ಕಿಣಿ

*(ಕಳೆದ ಸಂಚಿಕೆಯಿಂದ)*

ಇಂಥ ವಿಚಿತ್ರವಾದ ಮನಸ್ಥಿತಿಯಲ್ಲಿದ್ದಾಗಲೇ ಒಂದು ದಿನ ಗಾಣಗಾಪುರದಿಂದ ಸ್ವಚ್ಛ ಬಿಳಿ ಪೈಜಾಮ, ಫುಲ್ ಶರ್ಟಿನಲ್ಲಿ ದಿಗಂಬರ ಮತ್ತು ಅವನ ಬಳಗ ಬಂದು ಚಂದ್ರಭಾಗಾಳನ್ನು ನೋಡಿ ಪಸಂದ್ ಮಾಡಿ ಮದುವೆ ನಿಶ್ಚಯದ ವೀಳ್ಯವನ್ನು ಕೊಟ್ಟು ಹೋಗಿಬಿಟ್ಟರು. ಅವಳ ವಯಸ್ಸಿನ ಇತರ ಹುಡುಗಿಯರಿಗೆ ಇಂಥ ಸಂದರ್ಭದಲ್ಲಿ ಏನು ಅನಿಸುತ್ತಿತ್ತೋ ಗೊತ್ತಿಲ್ಲ. ಅವಳಿಗೆ ಮಾತ್ರ ಇಲ್ಲಿಂದ ಇನ್ನೆಲ್ಲೋ ಹೋಗುವ ಅವಕಾಶವೊಂದು ತೆರೆದಂತೆ ಮನಸ್ಸು ಹಗುರಾಯಿತು. ಶಾಲೆ ಬಿಟ್ಟು ಅದಾಗಲೇ ಒಂದಿಷ್ಟು ವರುಷಗಳು ಸಂದಿದ್ದವು. ಮನೆ, ಭಜನೆ ಬಿಟ್ಟರೆ ಇನ್ನೇನೂ ಇಲ್ಲದೆ, ಎಲ್ಲವೂ ಉಸಿರಿನಷ್ಟೇ ವಾಡಿಕೆಯಾಗಿ ಹೋಗಿದ್ದರಿಂದ ಎಂಥ ಬದಲಾವಣೆಗೂ ಆಕೆಯ ಮನಸ್ಸು ಹಾತೊರೆಯುತ್ತಿತ್ತು. ಕಡಿದಾದ ದಾರಿಯನ್ನು ದಾಟುವಾಗ ಇನ್ನೊಂದು ಕೈಯನ್ನು ಹಿಡಿದಂತೆ, ಇನ್ನೊಂದು ಜಗತ್ತನ್ನು ಪ್ರವೇಶಿಸುವುದಕ್ಕೆ ದಿಗಂಬರನ ಕೈ ಹಿಡಿಯುವುದು ಎಂದವಳಿಗೆ ತೋರುತ್ತಿತ್ತು. ಮೇಲಾಗಿ ಗಾಣಗಾಪುರ ಅಂದ ಮೇಲೆ ಅಲ್ಲಿನ ದತ್ತ ಮಂದಿರ, ಭಜನೆ, ಕೀರ್ತನೆಗಳ ಸೂಕ್ಷ್ಮ ಗುಂಜನವೊಂದನ್ನು ಅವಳ ಮನಸ್ಸು ಅದಾಗಲೇ ಆಲಿಸತೊಡಗಿತ್ತು.

ಅರಿಷಿಣ ಕೊಂಬಿನಂಥ ಎಳೆ ಮದುವಳತಿ, ಕನಸಿನಲ್ಲಿ ಕಾಲಿಡುವಂತೆ ದಿಗಂಬರನ ಮನೆಯೊಳಗೆ ಬಲಗಾಲನಿಟ್ಟು ಬಂದಳು. ಅವಳು ಶಾಲೆಯಲ್ಲಿದ್ದಾಗ, ಆಡುವಾಗ ಪುಟ್ಟ ಗೆಳತಿಯರ ಬಾಯಿಂದ 'ಒಂದೂರಲ್ಲಿ ಒಬ್ಬ ಇದ್ದನಂತೆ. ಅವನಿಗೆ ಮದುವೆ ಆಯಿತಂತೆ. ಆದರೆ ಅವನ ಹೆಂಡತಿಗೆ ಅಡಿಗೆ ಮಾಡಲು ಬರುತ್ತಿರಲಿಲ್ಲವಂತೆ.'-ಎಂದೆಲ್ಲ ಕಥೆಗಳನ್ನು ಆಲಿಸುವಾಗ ಅದನ್ನು ಆಡಿದ ಗೆಳತಿಯರ ಬಗೆಗೇ ಪಾಪ ಅನಿಸುತ್ತಿತ್ತು. 'ಒಂದೂರಲ್ಲಿ ಒಬ್ಬ ಇದ್ದನಂತೆ. ಅವನಿಗೆ ನಡೆಯಲು ಬರುತ್ತಿರಲಿಲ್ಲವಂತೆ'-ಎಂದು ಹೇಳುವಂತೆಯೇ ಅವರು ಹೇಳುತ್ತಿದ್ದರು. ಗಾಣಗಾಪುರ ದೇವಸ್ಥಾನಕ್ಕೆ ಹೋಗಿ ಹಣ್ಣುಕಾಯಿ ಮಾಡಿಸಿ ಬಂದು ನವದಂಪತಿ ಊರ ನದಿಯ ತೀರದಲ್ಲಿ ಕೂತಾಗ ದಿಗಂಬರ ಪಾವಟಿಗೆಗಳತ್ತ ಕೈಮಾಡಿ 'ಬಟ್ಟೆ ಒಗೆಯುವ ನಮ್ಮ ಜಾಗ ಅಗೋ ಅದು.' ಎಂದು ತೋರಿಸಿದ. ಬಟ್ಟೆಗಳನ್ನು ಒಗೆ ಒಗೆದು, ಕಲ್ಲಿನ ಪಾವಟಿಗೆಗಳೇ ಶುಭ್ರವಾಗಿ ನಯವಾಗಿ ಫಳ ಫಳ ಹೊಳೆಯುತ್ತಿದ್ದವು. ಭೀಮಾ ನದಿ ಶ್ವೇತಾಂಬರದಂತೆ ಹರಿಯುತ್ತಿತ್ತು. ದೂರದಿಂದ ಗಾಳಿಯಲ್ಲಿ ಯಾವುದೋ ಸ್ಪೀಕರಿನಿಂದ ಅವನಿಗೆ ಇಷ್ಟವಾದ ವಸಂತರಾವ್ ದೇಶಪಾಂಡೆಯವರ 'ಮೃಗನಯನಾ..ರಸಿಕ ಮೋಹಿನಿ..' ನಾಟ್ಯ ಗೀತದ ಸೊಲ್ಲು ಅಲೆಅಲೆಯಾಗಿ ಬೀಸಿ ಬರುತ್ತಿತ್ತು. ಎದುರಿಗೆ ಆರ್ತವಾಗಿ ಮಿನುಗುವ ಫಳಫಳ ಹರಿಣದಂಥ ಕಂಗಳ ಚಂದ್ರಭಾಗಾ, ಹಿನ್ನೆಲೆಯಲ್ಲಿ ಹರಿಣದಂತೆಯೇ ಹರಿವ ಹೊಳೆ..ಎಲ್ಲ ಸೇರಿದ ಅಮಾಯಕವೊಂದು ಅರಳುತ್ತಿತ್ತು. 'ನೀವು ನನ್ನ ಹೆಸರನ್ನೇಕೆ ಬದಲಿಸಲಿಲ್ಲ?' - ಎಂದು ಚಂದ್ರಭಾಗಾ ಕೇಳಿದಾಗ ದಿಗಂಬರ 'ನನಗೆ ಚಂದ್ರಭಾಗಾ ಇಷ್ಟ. ಪಂಢರಪುರದಿಂದ ಹರಿದುಬರುವ ಪುಣ್ಯಶಾಲಿನಿ ನದಿಯ ಹೆಸರನ್ನು ಯಾರಾದರೂ ಬದಲಿಸುತ್ತಾರೆಯೆ. ಛೇ'-ಎಂದ. ಪಂಢರಪುರದ ಚಂದ್ರಭಾಗೆಯೇ ಇಲ್ಲಿ ಭೀಮಾ ಆಗಿ ಪ್ರವಹಿಸುತ್ತಿದ್ದಾಳೆ ಎಂಬ ಅಂಶವೇ ಅವಳಲ್ಲಿ ಆಪ್ತವಾದ ಅಲೌಕಿಕವನ್ನು ಉದ್ದೀಪಿಸುತ್ತಿತ್ತು. ತವರು ಮನೆಯನ್ನು ಇಲ್ಲಿಗೆ ನಿತಾಂತವಾಗಿ ಜೋಡಿಸುತ್ತಿತ್ತು. ''ನನಗೆ ಅಡಿಗೆ ಕೆಲಸ ಅಷ್ಟು ಬರುವುದಿಲ್ಲ. ಅದರಲ್ಲಿ ಮನಸ್ಸು ತಾಗುವುದಿಲ್ಲ. ಆಯಿಗೆ ನೆರವಾಗುತ್ತಿದ್ದೆ ಅಷ್ಟೆ. ಆಯಿ ಪದೇ ಪದೇ 'ಅಡಿಗೆ ಕೆಲಸ ಕಲಿಯದಿದ್ದರೆ ಮುಂದೆ ನಿಂದೇನಾದೀತು'-ಎಂದು ಜರೆದಾಗೆಲ್ಲ ಭಯವಾಗುತ್ತಿತ್ತು'' ಎಂದು ಚಂದ್ರಭಾಗಾ ತುಂಬಾ ಸಲಿಗೆಯಿಂದ ಹೇಳಿದಾಗ ದಿಗಂಬರನಿಗೆ ಅಕ್ಕರೆಯಾಯಿತು. ಪ್ರಶಾಂತವಾಗಿ ಹೊಳೆಯುತ್ತಿದ್ದ ಅವಳ ತಲೆಯನ್ನು ನೇವರಿಸುತ್ತ 'ಅದರಲ್ಲೇನಾಯ್ತು. ಅಂಥ ದೊಡ್ಡ ವಿಷಯ ಅಲ್ಲ ಅದು'-ಎಂದ.



ತೀರದ ಪಾವಟಿಗೆಗಳಂತೆ ಇಲ್ಲೂ ಚಂದ್ರಭಾಗಾ ಹೆಸರು ಕ್ರಮೇಣ ಸವೆದು ಚಂದಾ ಆಯಿತು. ಚಂದಾತಾಯಿ ಆಯಿತು. ಮನೆಯಲ್ಲಿ ಚಂದಾಳ ಉಡಿಯಲ್ಲಿ ಚಂದ್ರನಷ್ಟೆ ಮುದ್ದಾದ ಜೀವವೊಂದು ತುಂಬಿ ಬಂದಾಗ, ಅವಳಿಗೆ ವಿಶ್ವವೇ ಒಂದು ಕೂಸಾಗಿ ಮಡಿಲಿಗೆ ಬಂದು ತನ್ನ ಹಾಲನ್ನು ಕುಡಿಯುತ್ತಿರುವಂತೆ ಅನಿಸಿತು. ಜೀವ ಪೋಷಕವಾದ ಪ್ರಸನ್ನತೆಯೊಂದು ಪಸರಿಸಿತು. ಸಜ್ಜನಗಡದಿಂದ ಬಂದಿದ್ದ ಸನ್ಯಾಸಿ ಭಜಕರೊಬ್ಬರು ದೂರದಲ್ಲಿ ಪ್ರವಚನ ಮಾಡುತ್ತಿದ್ದುದು ಸ್ಪೀಕರಿನಿಂದ ಕೇಳಿ ಬರುತ್ತಿತ್ತು. 'ಶರತ್ ಪೂರ್ಣಿಮೆಯ ಇರುಳಲ್ಲಿ, ದಟ್ಟ ಕಾಡಿನಲ್ಲಿ ಅಲ್ಲಲ್ಲಿ ತಿಂಗಳ ಬೆಳಕಿನ ಹಸ್ತಾಕ್ಷರವಿತ್ತು...' ಎಂದು ಕೇಳಿ ಬಂದ ರಾಗಬದ್ಧ ಮಾತು ಚಂದಾಗೆ ರೋಮಾಂಚನ ಉಂಟು ಮಾಡಿತು. ಹಸ್ತಾಕ್ಷರ ಶಬ್ದ ಅತ್ಯಂತ ವಿಶೇಷವಾಗಿ ಅವಳನ್ನು ನೇವರಿಸಿತು. ಮಗನಿಗೆ ಹಟದಿಂದ ಹಸ್ತಾಕ್ಷರ ಎಂದು ಹೆಸರಿಟ್ಟಳು. ಮರುದಿನ ರೊಟ್ಟಿಯ ಬುತ್ತಿಯನ್ನು ಆ ಸಜ್ಜನಗಡದ ಸನ್ಯಾಸಿಗೆ ದಿಗ್ಯಾನ ಮೂಲಕ ಕಳಿಸಿದಳು. ದಿಗ್ಯಾನ ಎರಡು ಗುಣಗಳು ಚಂದಾಗ ತುಂಬಾ ಸೇರುತ್ತಿದ್ದವು. ಒಂದು, ಯಾರಿಗಾದರೂ 'ನಮಸ್ಕಾರ' ಅಂತ ಹೇಳುವಾಗ ಎರಡೂ ಬೊಗಸೆಗಳನ್ನು ಅತ್ಯಂತ ಸುಂದರವಾಗಿ ಪ್ರಾಮಾಣಿಕವಾಗಿ ಜೋಡಿಸುವ ಆತನ ರೀತಿ. ಮೆಲ್ಲಗೆ ಬಂದು ಸೇರುವ ಅಂಗೈಗಳು ಹೂವಿನಂತೆ ಕಾಣುತ್ತಿದ್ದವು. ಅದರಲ್ಲೊಂದು ಮೃದುತ್ವವಿತ್ತು. ಕಿಂಚಿತ್ತೂ ಯಾಂತ್ರಿಕತೆ ಇಲ್ಲದ ಕೈ ಮುಗಿಯುವಿಕೆ ಅದಾಗಿತ್ತು. ಇನ್ನೊಂದು ಏನೇ ರಂಪ ರಾದ್ಧಾಂತ ಅಥವಾ ತುರ್ತು ಪರಿಸ್ಥಿತಿ ಸಂಭವಿಸುತ್ತಿದ್ದರೂ ಅವನು 'ಅಂಥ ದೊಡ್ಡ ವಿಷಯವೇನೂ ಅಲ್ಲ ಅದು' ಎಂದು ಹೇಳುತ್ತಿದ್ದ ರೀತಿ. ಅದು ಅರ್ಧಕ್ಕರ್ಧ ಭಾರವನ್ನು ಇಳಿಸುವಂತಿರುತ್ತಿತ್ತು. ಮತ್ತು ಕ್ಷುಲ್ಲಕತೆಯಿಂದ ಇನ್ನೂ ವಿಶಾಲವಾದದ್ದರ ಕಡೆಗೆ ತಳ್ಳುವಂತೆ ಇರುತ್ತಿತ್ತು. ಸಳಸಳ ಹರಿಯುವ ಭೀಮಾ ನದಿಯಲ್ಲಿ ಮೊಣಕಾಲ ಮಟ ನಿಂತು ಬಟ್ಟೆಗಳನ್ನು ಒಗೆಯುವಾಗ ಇದೇ ಥರದ ಅನುಭವ ಆಗುತ್ತಿತ್ತು. ಕಾಲುಗಳನ್ನು ಬಳಸಿ ಸಾಗುವ ನಿರಂತರ ಮಂಜುಳ ಪ್ರವಾಹ ಮನಸ್ಸಿಗೆ ಯಾವುದೋ ವಿಶಾಲವೊಂದರ ಸ್ಪರ್ಶವನ್ನು ಕೊಡುತ್ತಿತ್ತು. ಈ ನೀರಿಗೆ ಎಂಥ ಕಲೆಯನ್ನೂ ತೆಗೆಯುವ ಗುಣ ಇದೆ ಅನಿಸುತ್ತಿತ್ತು. ಅತ್ತೆ ಯಮುನಾಬಾಯಿ ಅತ್ಯಂತ ಮಾಯಿಷ್ಟ ಸ್ವಭಾವದವಳು. ಹೀಗೆ ಬಟ್ಟೆ ಒಗೆಯುತ್ತಿರುವಾಗಲೇ ಒಮ್ಮೆ ಚಂದಾಗೆ ಹೇಳಿದ್ದಳು-'ಅಡಿಗೆ ಕೆಲಸ ಅಂದ್ರೆ ಮತ್ತೇನು ಪಂಚಪಕ್ವಾನ್ನ ಅಲ್ಲ...ಇದ್ದುದರಲ್ಲೇ ಏನೋ ಬೇಯಿಸಿಕೊಂಡು ಉಣ್ಣೋದು. ದುಡಿದು ಹಸಿದ ಜೀವಕ್ಕೆ ಅದೇ ಪರಮಾನ್ನ ಕಾಳಜಿ ಮಾಡಬೇಡ ನೀ ಹೆಚ್ಚೇನಿದೆ ಮಾಡುವಂಥದ್ದು, ರೊಟ್ಟಿ ತಟ್ಟೋದು,

*PAGE DONATED BY : **AKADAS & FAMILY***

ಪಲ್ಲೆ ಮಾಡುದು ಅಥವಾ ಅನ್ನಕ್ಕಿಡುದು ಸಾರು ಮಾಡುದು. ಸಾಮಾನ್ಯವಾಗಿ ಅತ್ತೆ ಎನ್ನುವ ಕಲ್ಪನೆಗೆ ತೀರ ಭಿನ್ನವಾಗಿದ್ದ ಯಮುನಾಬಾಯಿ ಆಗಾಗ ಚಂದಾಳಿಂದ ಭಜನೆ ಹಾಡಿಸುತ್ತಿದ್ದಳು. ಪುಟ್ಟ ಟ್ರಾನ್ಸಿಸ್ಟರಿನಲ್ಲಿ 'ಮಂಗಲ ಪ್ರಭಾತ' ಕಾರ್ಯಕ್ರಮ ಕೇಳುವಾಗ, 'ಬರಕೋ ಬರಕೋ ಹಾಡು' ಎಂದು ಅತ್ತೆ ಸೊಸೆ ಇಬ್ಬರೂ ಬೇರೆ ಬೇರೆ ಸಾಲು ನೆನಪಿಟ್ಟುಕೊಂಡು, ಚಂದಾ ಬರೆದುಕೊಳ್ಳುತ್ತಿದ್ದಳು. ನಂತರ ಆ ಟ್ರಾನ್ಸಿಸ್ಟರ್, ಸೈಕಲ್ ಹ್ಯಾಂಡಲ್ಲಿನ ಹಿಂದೆ ವಿರಾಜಮಾನವಾಗಿ ಇಸ್ತ್ರಿ ಅಂಗಡಿಗೆ ಹೋಗಿ ಇಡೀ ದಿನ ದಿಗ್ಯಾ ಮತ್ತು ಚಂದಾರನ್ನು ಇಂಪಾಗಿ ಸಲಹುತ್ತಿತ್ತು. ಸಂಗೀತ ಕೂಡ ವಿಶಾಲವೊಂದರ ಜೊತೆಗಿನ ನಂಟನ್ನು ಜಾರಿಯಲ್ಲಿಟ್ಟಿರುತ್ತಿತ್ತು. ಬಾನುಲಿಯಲ್ಲಿ ಒಮ್ಮೆ ಸಂತ ಸಖೂಬಾಯಿಯ ಕುರಿತ ಕೀರ್ತನೆ ಬರುತ್ತಿತ್ತು. ಹಸ್ತಾಕ್ಷರನೂ ಆಲಿಸುತ್ತಿದ್ದ. ಅತ್ತೆ ಮತ್ತು ನಾದಿನಿಯರ ಕಾಟದಿಂದ ನಲುಗಿ, ಮನೆಕೆಲಸ ಜಾಸ್ತಿಯಾದಾಗ ಸಖೂ ಭಕ್ತಿಯ ಪರಾಕಾಷ್ಠೆಯಲ್ಲಿ ವಿಠಲನ ಮೊರೆ ಹೋಗುವಾಗ, ವಿಠಲನೇ ಬಂದು ಹಿಟ್ಟು ರುಬ್ಬುವುದು, ಹಿಟ್ಟು ಕಲೆಸುವುದು, ಭಾಂಡಿ ತೊಳೆಯುವುದು, ಕಸ ಗುಡಿಸುವುದು ಮಾಡುವ ಸನ್ನಿವೇಶ ಬಂದಾಗ ಎಲ್ಲರಿಗೂ ರೋಮಾಂಚನವಾಗುತ್ತಿತ್ತು. ಬಾನುಲಿಯಾದ್ದರಿಂದ ಯಾವುದೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಆದರೆ ಎಂದೋ ಎಲ್ಲೋ ಜಾತ್ರೆಯಲ್ಲಿ ನೋಡಿದ್ದ ಸಿನೆಮಾ, ನಾಟಕದ ನೆನಪುಗಳು ಸೇರಿಕೊಂಡು-ಮನಸ್ಸಿನ ಕಣ್ಣಲ್ಲಿ ದೃಶ್ಯವೊಂದು ಮೂಡುತ್ತಿತ್ತು. ಅದು ಕಪ್ಪು ಬಿಳುಪೇ ಇರುತ್ತಿತ್ತು. ಹಸ್ತಾಕ್ಷರ 'ವಿಠ್ಠಲ ಯಾಕೆ ಇಸ್ತ್ರಿ ಮಾಡಲು, ಬಟ್ಟೆ ಒಗೆಯಲು ನಮಗೆ ಸಹಾಯ ಮಾಡುವುದಿಲ್ಲ?' ಎಂದು ಕೇಳಿದ. ಚಂದಾಗೆ ಅವನ ಬಗ್ಗೆ ತುಂಬಾ ಕೌತುಕ ಮುದ್ದು ಉಂಟಾಗಿ ಅವನ ಕೆನ್ನೆ ತಟ್ಟಿ 'ಶಾಣ್ಯಾ ನನ್ನ ಪೋರ' ಎಂದು ಮುದ್ದಿಸಿ 'ಓಹೋ...ಅಭ್ಯಾಸ...ಹೋಂ ವರ್ಕು..ಪರೀಕ್ಷೆ ಬರೆಯೋದು...ಎಲ್ಲವನ್ನೂ ಅವನ ಮೇಲೆ ಹೊರಿಸುವ ವಿಚಾರ ಉಂಟೋ?' ಎಂದು ಕೀಟಲೆ ಮಾಡಿದಳು. ಆಮೇಲೆ 'ನಮ್ಮೆಲ್ಲರಲ್ಲೂ ಇದ್ದಾನೆ ವಿಠ್ಠಲ. ಅಗೋ ಆ ಟಾಂಗಾವಾಲಾನಲ್ಲೂ ಇದ್ದಾನೆ. ಆ ಕುದುರೇಲೂ ಇದ್ದಾನೆ' ಎಂದಳು. 'ಗಣಿತ ಮಾಸ್ತರರಲ್ಲೂ ಇದ್ದಾನೆ. ಮರಿಬೇಡಾ ಪೋರಾ' ಎಂದು ಬೆದರಿಸಿ ನಗುತ್ತ ದಿಗಂಬರ ಇಸ್ತ್ರಿಗೆ ಶರ್ಟು ಮುಗುಚಿದ.

ಹಸ್ತಾಕ್ಷರ ಒಂಬತ್ತನೆ ಇಯತ್ತೆಯಲ್ಲಿದ್ದಾಗ, ಎಂದಿನಂತೆ ಆಷಾಢ ಏಕಾದಶಿಯ ದಿಂಡಿ ಶುರುವಾಗುವ ಸಂಭ್ರಮ ಊರಿನಲ್ಲಿ ಗಲಗಲಿಸುತ್ತಿತ್ತು. ಸಾಮಾನ್ಯವಾಗಿ ಆಷಾಢ ಏಕಾದಶಿಯ ದಿನವೇ ಪಂಢರಪುರ ತಲುಪುವಂತೆ ನಾನಾ ಪ್ರಾಂತಗಳಿಂದ ಭಾವಿಕ ಸಮೂಹಗಳು ಕಾಲ್ನಡಿಗೆಯಲ್ಲಿ ನಾಮ ಸಂಕೀರ್ತನೆ ಮಾಡುತ್ತ ವಾರಗಟ್ಟಲೆ ಮುಂಚೆಯೆ ಹೊರಡುತ್ತಿದ್ದವು. ಆಗ ಅವರಲ್ಲಿ ನಾನಾ ವಯಸ್ಸಿನವರು ಇರುತ್ತಿದ್ದರು. ಆಯಾ ಊರಿನವರು ಅವರನ್ನು ತುಂಬ ಹೃತ್ಪೂರ್ವಕವಾಗಿ ಒಂದು ಭಕ್ತಿ ಸುಧೆಯ ಸಂಜೆಯ ಮೂಲಕ ಬೀಳ್ಕೊಡುತ್ತಿದ್ದರು. ಚಂದಾಬಾಯಿ ಮತ್ತು ಯಮುನಾಬಾಯಿ ಇಬ್ಬರೂ ಒಂದು ಬಗೆಯ ಮೂಕ ಆವೇಶದಿಂದ ಆ ಭಕ್ತಿಗಾನ ಸಂಧ್ಯೆಯಲ್ಲಿ ಪಾಲ್ಗೊಂಡರು. ದಿಂಡಿಯವರಿಗಾಗಿ ಪ್ರತಿಮನೆಯವರೂ 'ಫರಾಳ' ಮಾಡಿ ಕೊಡುತ್ತಿದ್ದರು. ಖಮಂಗ ಒಗ್ಗರಣೆಯ ಸಾಬುದಾಣೆ ಖಿಚಡಿಯನ್ನು ಅತ್ತೆ ಸೊಸೆ ಸೇರಿಯೇ ಬೇಯಿಸಿ ನೂರಾರು ಪೊಟ್ಟಣಗಳನ್ನು ಕಟ್ಟಿದರು. ಶಾಲೆಯಿಂದ ಬಂದ ಹಸ್ತಾಕ್ಷರನೂ ಪಾಲ್ಗೊಂಡ. 'ಕೆಲವರು ಬರಿಗಾಲಲ್ಲೆ ನಡೀತಾರೆ. ಹರಕೆಹೊತ್ತ ಹಿರಿಯರನ್ನು ಕೆಲವರು ಬೆನ್ನ ಮೇಲೆ ಹೊತ್ಕೊಂಡ್ಹೋಗ್ತಾರೆ. ಹೊತ್ಕೊಂಡ್ಹೋಗುವ ಹರಕೆಯನ್ನೂ ಕೆಲವರು ಹೊತ್ತಿರುತ್ತಾರೆ. ಸಂಬಂಧಿಕರೇ ಆಗಬೇಕೆಂದಿಲ್ಲ. ಅಲ್ಲಲ್ಲಿ ನಿಂತು ಫರಾಳ (ಫಲಾಹಾರ ಅನ್ನುವ ಶಬ್ದ ಮರಾಠಿ ಆಡುಮಾತಿನಲ್ಲಿ ಅದೆಂತೋ ಫರಾಳ ಆಗಿದೆ) ತಿಂದು ಚೇತರಿಸಿ ಮುಂದುವರೆಯುತ್ತಾರೆ. ಘಟ್ಟದ ದಾರಿಗಳಲ್ಲಿ ಸಾಗುವ ವಾಹನಗಳಿಂದ ಸುರಕ್ಷಿತವಾಗಿರಲು ಅಂಚಿನಲ್ಲೇ ನಡೆಯುತ್ತಾರೆ. ಆದರೆ ಉದ್ದಕ್ಕೂ ಭಜನೆ ಸಂಕೀರ್ತನೆಗಳೇ ಅವರಿಗೆ ಚೈತನ್ಯವನ್ನು ತುಂಬುತ್ತಿರುತ್ತವೆ. ಸಹಸ್ರಾರು ಜನರ ಸಮೂಹ ವಿಠೋಬನ ಧ್ಯಾನದಲ್ಲಿ ಒಂದು ಕಡೆ ಸಾಗರದಂತೆ ಸೇರುವ ಅನುಭವ ಅದೆಂಥದಿದ್ದೀತು ಅಲ್ಲಿ.' ಎಂದು ಯಮುನಾಬಾಯಿ ಹಸ್ತಾಕ್ಷರನಿಗೆ ಅತ್ಯಂತ ಸಮಾಧಾನದಲ್ಲಿ ವಿವರಿಸಿ ಹೇಳುತ್ತಿದ್ದಳು.

*(ಮುಂದುವರಿಯುವುದು)*

*(ಸೌಜನ್ಯ : ಅನಾರ್ಕಲಿಯ ಸೆಪ್ಟಿಪಿನ್)*

***(ಲತಾ ಮಂಗೇಶ್ಕರ ನೆನಪಿನಲ್ಲಿ ಅವರು ಹಾಡಿದ 'ಆತಾ ವಿಸಾವ್ಯಾಚೆ ಕ್ಷಣ, ಮಾಝೆ ಸೊನಿಯಾಚೆ ಮಣಿ' ಮರಾಠಿ ಗೀತೆಯ ಭಾವಾನುವಾದ)***

## ವಿಶ್ರಾಂತಿಯ ಕ್ಷಣ



ಈಗ ವಿಶ್ರಾಂತಿಯ ಕ್ಷಣ
ಘಮಘಮಿಸುವ ಹೂಬನ
ಈ ನೆನಪುಗಳ ಸರಮಣಿ
ಹೊಳೆವಾ ಬಂಗಾರದ ಗಣಿ

ಸಂಭ್ರಮದಲಿ ಗುಂಯಗುಡುವ
ಬಣ್ಣ ಬಣ್ಣದ ಅಂದದ ಚಿಟ್ಟೆಗಳು
ಒದ್ದೆ ಅಂಗಣದಲ್ಲಿ ಆಡುತಿದ್ದರು
ಆ ನನ್ನ ಮುದ್ದು ಮೊಮ್ಮಕ್ಕಳು

ನೆನಪಿನ ಮಾನಸ ಸರೋವರ
ಆಗಬೇಕಾಗಿದೆ ಹಗುರ
ಒದ್ದೆ ಕಣ್ಣಾಲಿಗಳೇ ಹಂಸ
ಮುಳುಗೆದ್ದರೇನೇ ಉಲ್ಲಾಸ

ಎಲ್ಲಿ ಕಣ್ಮರೆಯಾದರು
ಮುತ್ತಿನಂತಹ ಪ್ರೇಯಸಿಯರು
ಮರುಜನ್ಮದಲ್ಲಿ ಮಗಳಾಗುವರೇ
ಆಸೆಯನ್ನು ಹುಟ್ಟಿಸಿದವರು

ದೂರವಾದರೂ ಕಣ್ಮರೆಯಾಗಿಲ್ಲ
ಎದೆಯಲ್ಲಿ ಬಚ್ಚಿಟ್ಟುಕೊಂಡವರು
ನೆನಪಿನ ಮಣಿಗಳನ್ನು ಎಣಿಸುತ್ತ
ಆಗುವೆ ಅವರ ಇನ್ನಷ್ಟು ಹತ್ತಿರ

ಮೂಲ ಕವಿ : **ಬಾಲಕೃಷ್ಣ ಭಗ್ವಂತ ಬೋರ್ಕರ, ಗೋವಾ**
ಸಂಗೀತ : **ಸಲಿಲ ಕುಲಕರ್ಣಿ**
ಕನ್ನಡ ಭಾವಾನುವಾದ : **ಅಮಿತಾ ಭಾಗವತ್**

★★★

*PAGE DONATED BY : **SHRI ROKESH HEGDE & FAMILY, DAHISAR***

# ಚಲನಚಿತ್ರರಂಗದಲ್ಲಿ ಶಾಸ್ತ್ರೀಯ ಸಂಗೀತದ ಹೆಜ್ಜೆ

✍ ಶಾರದಾ ವಿಜಾಪುರೆ, ಡೊಂಬಿವಲಿ
ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ 'ವಿಶಾರದ' ಉತ್ತರಾರ್ಧದ ವಿದ್ಯಾರ್ಥಿನಿ

*(ಕಳೆದ ಸಂಚಿಕೆಯಿಂದ)*

ಗಾಯನ, ವಾದನಗಳಂತೆ ಚಲನಚಿತ್ರಗಳಲ್ಲಿ ನೃತ್ಯಗಳ ಪರಿಸ್ಥಿತಿಯೂ ಇದೆ. ಆರಂಭದಲ್ಲಿ ಸಿನಿಮಾಗಳಲ್ಲಿ ಶಾಸ್ತ್ರೀಯ ನೃತ್ಯಗಳೇ, ವಿಶೇಷವಾಗಿ ದಾಕ್ಷಿಣಾತ್ಯ ನೃತ್ಯ ಹಾಗೂ ನೃತ್ಯಕಾರರೇ ತುಂಬಿರುತ್ತಿದ್ದರು. ಬಹಳಷ್ಟು ಭಾಷೆಗಳ ಸಿನಿಮಾಗಳ ನೃತ್ಯಗಳಲ್ಲಿ ಹೆಚ್ಚಾಗಿ ದಕ್ಷಿಣ ಭಾರತದ ನೃತ್ಯ ತಾರೆಯರೇ ಅಭಿನಯಿಸುತ್ತಿದ್ದರು ಮತ್ತು ಅನೇಕ ನೃತ್ಯಗಾತಿಯರು ನಾಯಕಿಯ ಪಟ್ಟವನ್ನು ದೊರಕಿಸಿಕೊಂಡು ಮೆರೆದಿರುವರು. ವೈಜಯಂತಿಮಾಲಾ, ಹೇಮಾಮಾಲಿನಿ ಇವರೆಲ್ಲ ಭರತನಾಟ್ಯ ಪ್ರವೀಣೆಯರು. ವಹೀದಾ ರೆಹಮಾನ್, ರೇಖಾ, ಜಯಪ್ರದ ಮುಂತಾದವರೂ ಸಹ ನುರಿತ ನೃತ್ಯಗಾತಿಯರೇ. ಕನ್ನಡ ಚಿತ್ರರಂಗದಲ್ಲಿ ಉಡುಪಿ ಜಯರಾಂ ಮತ್ತು ದೇವಿ ಅವರು ಬಹಳಷ್ಟು ವರ್ಷಗಳವರೆಗೆ ಪ್ರಸಿದ್ಧ ನೃತ್ಯ ನಿರ್ದೇಶಕರಾಗಿದ್ದರು. 1955ರಲ್ಲಿ ತಯಾರಾದ ವಿ. ಶಾಂತಾರಾಮ್ ಅವರ ಪ್ರಸಿದ್ಧ ಚಿತ್ರ 'ಝುನಕ ಝುನಕ ಪಾಯಲ ಬಾಜೇ' ಹೆಸರೇ ಸೂಚಿಸುವಂತೆ ಸಂಪೂರ್ಣ ನೃತ್ಯಾಧಾರಿತ ಹಾಗೂ ಕಥಕ್ ನೃತ್ಯಗಳಿಂದಲೇ ತುಂಬಿದ ಚಿತ್ರ. ಈ ಚಿತ್ರದ ಮೂಲಕವಾಗಿ 'ಸಂತೂರ್' ವಾದನವನ್ನು ಭಾರತದ ಚಿತ್ರರಂಗದಲ್ಲಿ ಮೊಟ್ಟಮೊದಲು ಬಳಸಿದ್ದಾರೆ. ಅಲ್ಲದೇ ಪ್ರಸಿದ್ಧ ಸಂತೂರ್ ವಾದಕರಾದ ಶಿವಕುಮಾರ್ ಶರ್ಮಾ ಅವರೇ ನುಡಿಸಿದ್ದಾರೆ. ಇಡೀ ಭಾರತದಲ್ಲಿ ಪ್ರಸಿದ್ಧಿ ಹೊಂದಿದ, ಕೆ. ವಿಶ್ವನಾಥ್ ಅವರ ತೆಲುಗಿನ 'ಶಂಕರಾಭರಣಂ', ಶಾಸ್ತ್ರೀಯ ಗಾಯನ ಹಾಗೂ ನೃತ್ಯಗಳಿಂದ ತುಂಬಿದ ಸಂಗೀತಮಯ ಚಿತ್ರ. ಹೀಗೆ ಎಷ್ಟೋ ಚಿತ್ರಗಳನ್ನು ಹೆಸರಿಸಬಹುದು. ನಂತರ ಕಾಲ ಸರಿದಂತೆ ನೃತ್ಯಶೈಲಿಯಲ್ಲೂ ಬದಲಾವಣೆಯಾಗಿ ಡಿಸ್ಕೋ ಹಾಗೂ ಇನ್ನೂ ಅನೇಕ ಹೊಸ ಹೊಸ ಶೈಲಿಗಳು ಇಂದಿನ ಸಿನಿಮಾಗಳನ್ನು ಆವರಿಸಿಕೊಂಡಿವೆ.

ಇನ್ನು ಚಿತ್ರಗೀತೆಗಳ ಹಾಡುಗಾರರ ಬಗ್ಗೆ ಹೇಳುವುದಾದರೆ, ಆರಂಭದಲ್ಲಿ ಚಿತ್ರ ನಟರೇ, ಅಂದರೆ, ಸೆಹಗಲ್, ಅಶೋಕಕುಮಾರ್, ನೂರ್‌ಜಹಾಂ, ಸುರೇಂದ್ರ, ಶ್ಯಾಮ್, ಸಾನ್ಯಾಲ್ ಮುಂತಾದವರೆಲ್ಲ ತಮ್ಮ ನಟನೆಗೆ ತಾವೇ ಹಾಡಿಕೊಳ್ಳುತ್ತಿದ್ದರು ಮತ್ತು ಅವರೆಲ್ಲ ಶಾಸ್ತ್ರೀಯ ಸಂಗೀತದಲ್ಲಿ ನಿಪುಣರಾಗಿದ್ದರು. ನಂತರದ ದಿನಗಳಲ್ಲಿ ಪಾರ್ಶ್ವಗಾಯನದ ಪದ್ಧತಿ ಜಾರಿಗೆ ಬಂತು. ಆರಂಭದಲ್ಲಿ ಖಾನ್‌ಮಸ್ತಾನಾ, ಟುನ್‌ಟುನ್, ರಾಜಕುಮಾರಿ, ಜೋಹರಾ, ಲಲಿತಾ ದೇವುಲಕರ, ಸರಸ್ವತಿ ರಾಣೆ ಮುಂತಾದವರು ಹಿನ್ನೆಲೆ ಗಾಯಕರಾಗಿದ್ದರು. ದಕ್ಷಿಣ ಭಾರತದ ಚಿತ್ರಗಳಲ್ಲಿ ದಾಕ್ಷಿಣಾತ್ಯ ಸಂಗೀತದಲ್ಲಿ ಪ್ರಕಾಂಡ ಪಂಡಿತರಾದ ಬಾಲಮುರಳಿಕೃಷ್ಣ, ಘಂಟಸಾಲ, ಸಿ. ಎಸ್. ಜಯರಾಮನ್, ಕಿರ್ಕಾಳಿ ಗೋವಿಂದರಾಜು, ಪಿ. ಲೀಲಾ ಮುಂತಾದವರು ಪಾರ್ಶ್ವಗಾಯಕರಾಗಿದ್ದರು. 1942-43 ರಿಂದ ಮನ್ನಾಡೇ, ಮುಹಮ್ಮದ ರಫಿ, ಮುಖೇಶ, ಲತಾ ಮಂಗೇಶ್ಕರ, ಹೇಮಂತಕುಮಾರ, ತಲಟ್ ಮೆಹಮ್ಮೂದ್, ಕಿಶೋರಕುಮಾರ, ಆಶಾ ಭೋಸಲೆ, ಸುಮನ್ ಕಲ್ಯಾಣಪುರ, ಮಹೇಂದ್ರ ಕಪೂರ್ ಮುಂತಾದ ಶಾಸ್ತ್ರೀಯವಾಗಿ ಸಂಗೀತಾಭ್ಯಾಸ ಮಾಡಿದ ಗಾಯಕರು 3-4 ದಶಕಗಳ ಕಾಲ ಚಲನಚಿತ್ರ ರಂಗದಲ್ಲಿ ಹಿನ್ನಲೆ ಗಾಯನದ ಸಾಮ್ರಾಟರಾಗಿ ಮೆರೆದಿದ್ದಾರೆ. ಇವರ ಸಾಲಿಗೆ, ದಕ್ಷಿಣ ಭಾರತದ ಬಹುತೇಕ ಎಲ್ಲಾ ಭಾಷೆಗಳಲ್ಲೂ ತಮ್ಮ ಕಂಠದಾನ ಮಾಡಿರುವ ಎಸ್. ಪಿ. ಬಾಲಸುಬ್ರಮಣ್ಯಂ, ಪಿ. ಬಿ. ಶ್ರೀನಿವಾಸ, ಎಸ್. ಜಾನಕಿ, ಪಿ. ಸುಶೀಲ, ವಾಣಿ ಜಯರಾಂ, ಕಸ್ತೂರಿ ಶಂಕರ ಮುಂತಾದವರೂ ಸೇರುತ್ತಾರೆ. ಮೇಲೆ ಹೇಳಿದ ಬಹುತೇಕ ಎಲ್ಲಾ ಗಾಯಕರೂ ಬಹುಭಾಷಾ ಚಿತ್ರಗಳಲ್ಲಿ ಪಾರ್ಶ್ವ ಗಾಯಕರು. ಚಿತ್ರರಂಗದಲ್ಲಿ ಇವರ ಕಾಲ ಸರಿದಿರಬಹುದು. ಆದರೆ ಇವರೆಲ್ಲ ತಮ್ಮ 'ಸದಾ ಹಸಿರು' ಹಾಡುಗಳಿಂದಾಗಿ ಜನಮಾನಸದಲ್ಲಿ ಇಂದಿಗೂ ಬಾಡಿಹೋಗದೆ ಹಸಿರಾಗಿಯೇ ಉಳಿದಿದ್ದಾರೆ. ಬದಲಾವಣೆ ಕಾಲನಿಯಮ. ಇಂದು ಸಿನಿಮಾಗಳಲ್ಲಿ ಇಂದಿನ ಕಾಲಕ್ಕೆ, ಜನಾಂಗದ ಅಭಿರುಚಿಗೆ ಹೊಂದುವಂಥ ಹಾಡು, ಹಾಡುಗಾರರು ಹಾಗೂ ಶೈಲಿಗಳು ಆಕ್ರಮಿಸಿಕೊಂಡಿವೆ.



ಚಲನಚಿತ್ರಗಳಲ್ಲಿ ಶಾಸ್ತ್ರೀಯ ಸಂಗೀತವಾದಕರದೂ ಸಹ ಗಣನೀಯವಾದ ಕೊಡುಗೆಯಿದೆ. ಶಹನಾಯಿ ವಾದಕ ಬಿಸ್ಮಿಲ್ಲಾ ಖಾನ್, ಸರೋದ ವಾದಕ ಜರೀನ್ ದಾರುವಾಲಾ, ಸಿತಾರ್ ವಾದಕ ರಈಸ್ ಖಾನ್ ಮತ್ತು ಅಬ್ದುಲ್ ಹಲೀಂ ಖಾನ್, ತಬಲಾ ವಾದಕ ಸಮತಾ ಪ್ರಸಾದ್, ಸಂತೂರ್ ವಾದಕ ಶಿವಕುಮಾರ ಶರ್ಮಾ, ಕೊಳಲುವಾದಕ ಪನ್ನಾಲಾಲ ಘೋಷ್ ಮತ್ತು ಹರಿಪ್ರಸಾದ ಚೌರಸಿಯಾ ಮುಂತಾದ ಹೆಸರಾಂತ ವಾದಕರು ಚಿತ್ರಗೀತೆಗಳ ಹಿನ್ನಲೆಯಲ್ಲಿ ಸಾಂಗತ್ಯ ಕೊಟ್ಟು ಜೀವ ತುಂಬಿದ್ದಾರೆ.

ಇನ್ನು ಹಾಡುಗಳ ಬಗ್ಗೆ ಹೇಳಬೇಕೆಂದರೆ 20ನೇ ಶತಮಾನದಲ್ಲಿ ಹಾಗೂ 21ನೇ ಶತಮಾನದ ಆರಂಭದಲ್ಲಿ ತಯಾರಾದ ಸಿನಿಮಾಗಳು ಶುದ್ಧ ರಾಗ ಆಧಾರಿತ ಹಾಡುಗಳಿಂದಲೇ ತುಂಬಿವೆ. ಅಂತಹ ಹಾಡುಗಳಲ್ಲಿ ಕೆಲವೇ ಕೆಲವು ಹಾಡುಗಳನ್ನು ಇಲ್ಲಿ ಹೆಸರಿಸಬಯಸುತ್ತೇನೆ.

1. ನಯನೋಂಮೆ ಬದಿರಾ ಛಾಯೆ - ರಾಗ ಭಿಮಪಲಾಸಿ
2. ಮಧುಬನಮೆ ರಾಧಿಕಾ ನಾಚೆರೆ - ರಾಗ ಹಮೀರ
3. ಜಿಸ್ ಗಲೀ ಮೇ ತೇರಾ ಘರ್ ನ ಹೋ ಬಾಲಮಾ - ರಾಗ ಭೈರವಿ
4. ಕಹೀಂ ದೂರ್ ಜಬ್ ದಿನ್ ಢಲ್ ಜಾಯೇ - ರಾಗ ಯಮನ್
5. ಕುಹೂ ಕುಹೂ ಬೋಲೆ ಕೋಯಲಿಯಾ - ರಾಗ ಬಸಂತ

*PAGE DONATED BY :* ***SHRI ANANT GANESH BHAT, BANDRA & FAMILY***

6. ಜೋ ವಾದಾ ಕಿಯಾ ವೋ ನಿಭಾನಾ ಪಡೇಗಾ - ರಾಗ ಪಹಾಡಿ

7. ದೀವಾನಾ ಮುಝುಸಾ ನಹೀಂ ಇಸ್ ಅಂಬರ್ ಕೆ ನೀಚೆ - ರಾಗ ಪಹಾಡಿ

8. ಕೋರಾ ಕಾಗಜ ಥಾ ಯೇ ಮನ ಮೇರಾ - ರಾಗ ಪಹಾಡಿ

9. ಇಶಾರೋಂ ಇಶಾರೋಂ ಮೇ ದಿಲ್ ಲೇನೆವಾಲಿ - ರಾಗ ಪಹಾಡಿ

10. ಸಾವನ್ ಕಾ ಮಹಿನಾ ಪವನ ಕರೆ ಸೋರ್ - ರಾಗ ಪಹಾಡಿ

11. ಚಲೋ ದಿಲ್ದಾರ ಚಲೋ ಚಾಂದ್ ಕೆ ಪಾರ ಚಲೋ - ರಾಗ ಪಹಾಡಿ

12. ತೌಬಾ ತೇರಾ ಜಲವಾ - ರಾಗ ಬಾಗೇಶ್ರೀ

13. ಸಪನೋಂ ಸೆ ಭರೇ ನೈನಾ - ರಾಗ ಭೈರವಿ

14. 'ಸುವರ್ಣ ಸುಂದರಿ' ಚಿತ್ರದಲ್ಲಿ 'ಸಜ ಸಿಂಗಾರ ಋತು ಆಯೀ ಬಸಂತಿ' ಹಾಡಿನ ನಾಲ್ಕು ಚರಣಗಳನ್ನು ನಾಲ್ಕು ವಿಭಿನ್ನ ರಾಗಗಳಲ್ಲಿ ಸಂಯೋಜಿಸಿದ್ದಾರೆ. ಈ ನಾಲ್ಕು ಚರಣಗಳು ಸೋಹನಿ, ಬಹಾರ್, ಜೌನಪುರಿ ಹಾಗೂ ಯಮನ್ ರಾಗಗಳಲ್ಲಿವೆ.

15. 'ಸ್ತ್ರೀ' ಚಿತ್ರದ "ಆಯೀ ಆಯೀ ಬಸಂತಿ ಬೇಲಾ" ಈ ಹಾಡು ಮೊದಲು 'ಬಸಂತ' ರಾಗದಲ್ಲಿ ಆರಂಭವಾಗಿ ಮಧ್ಯದಲ್ಲಿ 'ಖಮಾಜ್' ರಾಗಕ್ಕೆ ಹೊರಳಿ ಪುನಃ 'ಬಸಂತ' ರಾಗದಲ್ಲಿ ಕೊನೆಗೊಳ್ಳುತ್ತದೆ. ಇದಕ್ಕೆ ಶಾಸ್ತ್ರೀಯ ಸಂಗೀತದಲ್ಲಿ 'ಆವಿರ್ಭಾವ-ತಿರೋಭಾವ' ಎನ್ನುತ್ತಾರೆ.

16. ಕನ್ನಡದ 'ಜೀವನ ಚೈತ್ರ' ಚಿತ್ರದಲ್ಲಿ ಹಾಡಲು ಕಠಿಣವಾದ 'ತೋಡಿ' ರಾಗದಲ್ಲಿ ಡಾ. ರಾಜಕುಮಾರರವರು "ನಾದಮಯ ಈ ಲೋಕವೆಲ್ಲಾ" ಎಂಬ ಹಾಡನ್ನು ಹಾಡಿದ್ದಾರೆ.

ಈ ರೀತಿಯಾಗಿ ಚಲನಚಿತ್ರದ ಪ್ರತಿಯೊಂದು ವಿಭಾಗದಲ್ಲಿಯೂ ಶಾಸ್ತ್ರೀಯ ಸಂಗೀತದ ಅಮೂಲ್ಯವಾದ ಕೊಡುಗೆ ಇದೆ. ಇಂದು ಚಲನಚಿತ್ರಗಳಲ್ಲಿ ಎಷ್ಟೋ ಬದಲಾವಣೆಗಳಾಗಿರಬಹುದು. ಆದರೂ ಸಹ ಇಂದಿಗೂ ಶಾಸ್ತ್ರೀಯ ಸಂಗೀತದ ಕಿಂಚಿತ್ತಾದರೂ ಪ್ರಭಾವ ಅಲ್ಲಿ ಇದ್ದೇ ಇದೆ.

(ಆಕರ ಗ್ರಂಥ - 'ಸಂಗೀತ ವಿಶಾರದ' (in Hindi) ಲಕ್ಷ್ಮಿನಾರಾಯಣ ಗರ್ಗ ಮತ್ತು 'ಸಂಗೀತ ಕಲಾವಿಹಾರ' (in Hindi) ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ, ಮೀರಜ್‌ದ ಮಾಸಪತ್ರಿಕೆ.) ❍






PAGE DONATED BY : **SHRI V. G. BHAT, NIGDI**

# ಮರೆಗುಳಿತನ : ಇರಲೇಬೇಕಾದ್ದು

✍ ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ನಾವೆಲ್ಲ ನಮ್ಮ ದಿನನಿತ್ಯದ ವ್ಯವಹಾರದಲ್ಲಿ ಅದೆಷ್ಟು ಬಾರಿ 'ಮರೆತೇ ಹೋಯ್ತು' ಅಂತ ಹೇಳುತ್ತೇವೆಂಬುದೇ ನೆನಪಿರುವುದಿಲ್ಲ. ಈ 'ಮರೆವು' ಎಂಬುದಿದೆಯಲ್ಲ, ಇದು ಒಳಿತೂ ಹೌದು, ಕೆಡುಕೂ ಹೌದು. ಒಂದು ವೇಳೆ ನಮ್ಮ ಬಾಲ್ಯದಿಂದ ಇಲ್ಲಿಯವರೆಗೆ ನಡೆದ ಕಹಿ ಘಟನೆಗಳನೆಲ್ಲ ಮರೆಯದೇ ಇದ್ದಿದ್ದರೆ, ಇಂದು ನಾವು ನಾವಾಗಿ ಇರುತ್ತಿರಲಿಲ್ಲ. ಮರೆಗುಳಿತನ ಎಂಬುದು ಮರೆವು ಇಲ್ಲದ ಮನುಷ್ಯ ಇರಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಅತ್ಯಂತ ಸಹಜ ಪ್ರಕ್ರಿಯೆಗಳಲ್ಲೊಂದು. ಹಾಗಂತ ನಾವ್ಯಾರು ತಲೆಕೆಡಿಸಿಕೊಳ್ಳುವುದೂ ಇಲ್ಲ. ಜವಾಬ್ದಾರಿಯಿಂದ ನುಣುಚಿಕೊಳ್ಳುವ ಅತ್ಯಂತ ಪ್ರಭಾವಶಾಲಿ ಅಸ್ತ್ರ ಅಂದರೂ ಅನ್ನಬಹುದೇನೋ? ವಯಸ್ಸಿಗೂ, ಮರೆವಿಗೂ ನೇರ ಸಂಬಂಧವಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ವಯಸ್ಸಾದವರಲ್ಲಿ ಈ ಮರೆಗುಳಿತನ ತುಸು ಜಾಸ್ತಿ.

ಕಳೆದೆರಡು ಮೂರು ವರ್ಷಗಳಿಂದ ಬದುಕನ್ನೇ ಬರಡಾಗಿಸುತ್ತಿರುವ ಈ ಕೊರೋನಾ ಉಪಟಳಗಳನ್ನೆಲ್ಲ ನೆನಪಿನಲ್ಲೇ ಇಟ್ಟುಕೊಂಡಿದ್ದರೆ. ನೆಮ್ಮದಿಯ ಬದುಕು ಅಸಾಧ್ಯವೇ ಆಗುತ್ತಿತ್ತು. ನಡೆದ ಸಾವು-ನೋವು ಸಂಕಟ ಬಳಲಿಕೆಗಳನ್ನೆಲ್ಲ ಅಷ್ಟಷ್ಟಾಗಿ ಮರೆಯುತ್ತ ಬಂದಿರುವುದೇ ಲೇಸೆನಿಸುತ್ತದೆ. ಈ ದೃಷ್ಟಿಯಲ್ಲಿ ಮರೆವು ನಮಗೊಂದು ರೀತಿಯ ವರವೆಂದೇ ಅಂದುಕೊಳ್ಳಬೇಕು. ಆದರೆ ಒಂದಂತೂ ನಿಜ, ಮರೆಗುಳಿತನ ಅತಿ ಆದರೆ, ಸಂಕಟ ಕಟ್ಟಿಟ್ಟದ್ದು. ಬದುಕಿನಲ್ಲಿ ಸುಖಕ್ಕಿಂತ ಕಷ್ಟಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಹೀಗಿದ್ದಾಗ್ಯೂ ಬೇಡವಾಗಿದ್ದನ್ನು ಮರೆತು ಮುಂದುವರಿಯುವದೇ ಜಾಣತನ. ನಮ್ಮ ಬದುಕಿನಲ್ಲಿ ನಾವು ಸದಾ ಹೇಳುತ್ತಿರುವುದು Be Positive ಆದರೆ ಕೊರೋನಾ ವಿಷಯದಲ್ಲಿ ಮಾತ್ರ Positive ಪದವೇ ಬೆಚ್ಚಿ ಬೀಳಿಸುತ್ತದೆ. ಮರೆಗುಳಿತನಕ್ಕೆ ಹಲವು ಚಿಂತಕರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. Khalil Gibrem ಹೇಳುವಂತೆ "Forgetfulness is a form of Freedom" ಇದರರ್ಥ ಯಾವುದೇ ಜವಾಬ್ದಾರಿ ಅಥವಾ accountability ಇಲ್ಲವೆಂತಲ್ಲ. ಒಂದು ರೀತಿಯ ಸ್ವಾತಂತ್ರ್ಯ ಅಂದರೆ ಸ್ವೇಚ್ಛೆಯೂ ಅಲ್ಲ. ಬದಲಿಗೆ ಸಕಾರಾತ್ಮಕವಾಗಿ ಸ್ವೀಕರಿಸಬೇಕು.

ರಮಣ ಮಹರ್ಷಿಗಳು ಅನ್ನುವಂತೆ "Forgetfulness of your real nature is true death; remembrance of it is re-birth" ಏನು ಕೇಳಿದರೂ ಮರೆತೇ ಹೋಯಿತು ಎನ್ನುವುದು ಕೆಲವರ ಅಭ್ಯಾಸ. ಇಂತಹ ಸಂದರ್ಭದಲ್ಲಿ ಅವರ ಅಸ್ತಿತ್ವವೇ ಪ್ರಶ್ನಾರ್ಥಕವಾಗಿ ಬಿಡುತ್ತದೆ. ಅಕಸ್ಮಾತ್ ನೆನಪು ಉಳಿಯಿತೆಂದರೆ ಅದೊಂದು ರೀತಿಯ ಪುನರ್ಜನ್ಮ! Mason Cooley ಅವರ ವ್ಯಾಖ್ಯಾನ ಅತಿ ಸ್ವಾರಸ್ಯಕರ ಎನಿಸುತ್ತದೆ. "Wisdom is Founded on memory, happiness on Forgetfulness" ಇಲ್ಲಿ ಸಹಜವಾಗಿಯೇ ಒಂದು ಪ್ರಶ್ನೆ ಮೂಡುತ್ತದೆ. ಮರೆಗುಳಿತನ ನಿಜಕ್ಕೂ ಸಂತೋಷಪಡುವ ವಿಷಯವೇ? ಕೆಲವೊಮ್ಮೆ ಹೌದು ಎಂತಲೂ ಅನಿಸುತ್ತದೆ. ಮತ್ತೆ ಅದೇ ಕೊರೋನಾ ವಿಷಯಕ್ಕೆ ಬಂದರೆ, ಇಂದಿನ ಸಂತೋಷಕ್ಕೆ ಕಾರಣ. ಅಂದಿನ ದುಃಖವನ್ನು ಮರೆತದ್ದೇ ಆಗಿದೆ. ಇನ್ನೂ ಅದೇ ಗುಂಗಿನಲ್ಲಿದ್ದಿದ್ದರೆ 'ಇಂದು' ಎಂಬುದು ನಮ್ಮ ಪಾಲಿಗೆ ಇರುತ್ತಲೇ ಇರಲಿಲ್ಲ.



Adrian Forty ಹೇಳುವಂತೆ "Memory only becomes interesting through its struggle with Forgetfulness" ಹಾಗಿದ್ದರೆ ನೆನಪು ಮತ್ತು ಮರೆಗುಳಿತನ ಒಂದಕ್ಕೊಂದು ಪೂರಕವೇ? ಒಂದರ್ಥದಲ್ಲಿ ಸರಿ ಎಂತಲೂ ಅನಿಸುತ್ತದೆ. ಎಂದೋ ಮರೆತಿದ್ದು ಒಮ್ಮೆಲೆ ಜ್ಞಾಪಕಕ್ಕೆ ಬಂದರೆ ನಿಜಕ್ಕೂ ಖುಷಿ ಎನಿಸುವುದಿಲ್ಲವೇ? ಒಂದು ವೇಳೆ 'ಮರೆವು' ಎಂಬುದೇ ಇಲ್ಲದಿದ್ದರೆ 'ನೆನಪು' ಎಂಬುದಕ್ಕೇನರ್ಥ ಉಳಿಯುತ್ತಿತ್ತು?

ನಮ್ಮಲ್ಲಿ ಬಹಳಷ್ಟು ಜನರಿಗೆ ಹೇಳಿದ್ದನ್ನೇ ಹೇಳುವ ಅಭ್ಯಾಸ ಅನ್ನಿ ಅಥವಾ ಚಾಳಿ ಅನ್ನಿ. ಆದರೆ ಅದನ್ನೇ ಹೇಳುತ್ತ ಸಂತೋಷ ಪಡುತ್ತಾರಲ್ಲ.! ಇದನ್ನೇ Friedrich Nietzsch ವಿವರಿಸುವುದು ಹೀಗೆ "The advantage of a Bad Memory is that one enjoys several times of the same good things for the first time" ಹಾಸ್ಯ ಚಟಾಕಿ ಹಾರಿಸುವವರಿಗೆ ಇದು ಸರಿಯಾಗಿ ಹೋಲುತ್ತದೆ. ಹೋದ-ಹೋದಲ್ಲಿ, ಕಂಡ-ಕಂಡಲ್ಲಿ ಅದೇ ಅದು ಹಾಸ್ಯ ಹೇಳುತ್ತ ತಾವೇ enjoy ಮಾಡುತ್ತಾರೆ.!

ಹಾಗಿದ್ದರೆ, ಈ ಮರೆಗುಳಿತನ ಎಂಬುದು ಮನುಷ್ಯನ ಬದುಕಿನ ಒಂದು ಅಂಗವೇ? ಸುಹಾಸ್ ಭಟ್‌ನಾಗರ್ ಹೇಳುವಂತೆ "Forgetfulness is the most relevant blessing, the God had favoured to human being. Had we locked it we would have been in decental asylum" ಇದು ಎಷ್ಟೊಂದು ನಿಜ ಅಂತ ಅನಿಸುತ್ತಿಲ್ಲವೇ? ಪ್ರತಿಯೊಬ್ಬನ ಬದುಕಿನಲ್ಲೂ ಒಂದಲ್ಲ ಒಂದು ಸಮಸ್ಯೆ ಸದಾ ಇದ್ದೇ ಇರುತ್ತದೆ. ಸಮಸ್ಯೆಗಳಿಲ್ಲದ ಬದುಕು, ಬದುಕೇ ಅಲ್ಲ ಎನ್ನುವಷ್ಟರ ಮಟ್ಟಿಗೆ. ಅವುಗಳ ಪ್ರಮಾಣ, ಅವಧಿ ಅದೆಷ್ಟು ಬಾರಿ ಎಂಬುದೆಲ್ಲ ಭಿನ್ನ-ಭಿನ್ನವಾಗಿದ್ದರೂ, ಈ ಒಂದು ಹಂತವನ್ನು ದಾಟಿಯೇ ಮುನ್ನಡೆಯಬೇಕಾಗುತ್ತದೆ. ನನಗಿಲ್ಲಿಯವರೆಗೆ ಯಾವುದೇ ಸಮಸ್ಯೆ ಬಂದೇ ಇಲ್ಲ ಅನ್ನುವ ವ್ಯಕ್ತಿ ಜಗತ್ತಿನಲ್ಲೇ ಇರಲಾರ. ಕೆಲವರು ಕೇವಲ ತಮ್ಮ ಸಮಸ್ಯೆಗಳನ್ನೇ ವೈಭವೀಕರಿಸುತ್ತಾ ಸದಾ ಕೊರಗುತ್ತಿರುತ್ತಾರೆ. ಇನ್ನು ಕೆಲವರು ಸಮಸ್ಯೆಗಳನ್ನೆಲ್ಲಾ ಮರೆತು ಸಂತೋಷದಿಂದ ಬದುಕು ಸಾಗಿಸುತ್ತಿರುತ್ತಾರೆ. ಇದೇ ಅಲ್ಲವೇ ಬದುಕಿನ ರಹಸ್ಯ? ಇದೇ ಅಲ್ಲವೇ ಮರೆಗುಳಿತನದ ಲಾಭ? ❍


## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
**S.B. A/c No. 520101249405926**
**IFS Code : UBINO904996**

2) **Havyaka Welfare Trust Women Welfare Cell**
**S.B. A/c No. 520101249405962**
**IFS CODE : UBINO904996**

**Donations to Havyaka welfare Trust' qualify for tax deduction under section 80 (G).**



*PAGE DONATED BY :* ***SMT. KALA BHAGWAT,*** KHARGAR ***IN MEMORY OF MOTHER LATE SMT. GOURI BHAT***

# Inclusive Growth in India : Disappointing Experiences Looming Large

✍ **Dr. G. V. Joshi,** Former Professor and Chairman
Dept. of Economics, Mangalore University

*(Continued from last issue)*

The Coalition Government, led by Janata Dal and BJP , declared on November 1, 2006, the second agricultural policy in Karnataka with an essentially positive approach to tenancy. It ensured an elaborate public debate on this issue . But the second policy fell through due to the political change that followed in the State later. Krishna Byre Gouda , in the capacity of Minister of Agriculture in the Government of Karnataka showed in 2017 a favorable reaction to the Model Leasing Act of 2016. But no further step was taken subsequently. In fact with computerized land records, Karnataka should have taken a lead in initiating a policy measure for promoting agricultural tenancy on the basis of the said Model Act. Like Karnataka many other states have shown lukewarm attitude to the Act though they have not failed to extend half-hearted support to the Central Government's goal of Doubling Farmers Income by 2022. Inclusive growth is not even a dream in agriculture in many States reeling from Covid 19 though 2022 is approaching with rapidity ( Ajit Ranade, 2021).

That adequate justice should be done to the poor in India was pointed out by the Supreme Court of India. In one of its land mark and hard hitting judgments pronounced in October 1996 the Court reminded the centre, states and even local bodies of their constitutional responsibilities of providing residence to both the rural and the urban poor in a phased manner by making provision in their annual budgets. As the Judgment observed, "It is rather unfortunate that even after half century from the date of Independence, no constructive planning has been implemented to ameliorate the conditions of the rural people by providing them regular source of livelihood or infrastructural facilities " (Joshi and Prasad, 2014). This judgment had, however, a highly restricted coverage and could not matter much in reality because it was announcement for a particular case; it was not a law to produce commanding effect in the country albeit looming large as a threshold of thinking on inclusive growth. Many such judicial pronouncements with wide and deep social concern have remained till date in cold storage.

The higher rate of economic growth in the reform era (1991) was accompanied by grave inequality of income and wealth. This prompted the Central Government to raise the slogan of inclusive growth in the Eleventh Five Year Plan. The then Prime Minister Manmohan Singh addressing the Planning Commission on October 18, 2006 declared that it would be a historic plan with the distinct goal of more inclusive growth.



Building on the growth momentum, increasing the rate of agricultural growth, growth strategy generating much needed employment, public-private partnership for the development of infrastructure and deciding priorities in planning for inclusive growth were but some of the goals which then engaged the attention of the Government of India.

The 11th Five Year Plan Document (2007-12) admitted that in spite of impressive growth stories characterizing the Indian scene, the problems of poverty and inequality continued baffle ( Approach Paper, 2006). It listed various forms of divides: between the haves and the have-nots; between rural and urban areas; between the employed and the under/unemployed; between different states, districts and communities; and finally between genders. As the Document deplored, "Such marked inequalities are a matter of concern and, in some cases, even shame. The 11th Plan must ensure that the growth process helps to bridge these divides." We do not come across any explanation or interpretation in the Document to suggest that inclusive growth means upliftment of all sections of the society. Using comparable data for the period 1999-2000 and 2004-2005 the Document plainly stated that reduction in poverty during this period was only about 0.8 percentage points per year . It was, after all, a negligible rate of decline, not resembling even a drop in the ocean.

The 11th Plan Document referred to inclusive growth as : "This broad vision of the Eleventh Plan includes several inter-related components: rapid growth that reduces poverty and creates employment opportunities, access to essential services in health and education especially for the poor, equality of opportunity, empowerment through education and skill development, employment opportunities underpinned by the National Rural Employment Programme, environmental sustainability, recognition of women's agency and good governance". In this Document we do not come across any explanation or interpretation and not even inference to suggest that inclusive growth would mean growth and welfare of all sections of the society.

However, politics of inclusive growth superseded its economics to the extent of becoming a strategy of mobilising votes for UPA from the very beginning. This was done by none else than Sonia Gandhi in 2009, the President of UPA . She thought of projecting inclusive growth as well-being of all social sections. In her own words, "To be equitable , economic growth has to be

*PAGE DONATED BY :* ***SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

sustainable. To be sustainable, economic growth has in turn to be all inclusive. All inclusive is no longer the greatest good of the greatest number. It is Sarvodaya or the rise of all."

Sonia's words of political wisdom were quoted with a sense of approval, fulfillment and dedication by the then Union Finance Minister Pranav in the interim budget presented in Lok Sabha on February 16,2009. Immediately after getting the satisfaction of reproducing her words Pranav said that the Eleventh Five Year Plan provided a comprehensive framework and strategy for making growth faster and more inclusive. There was nothing in the Plan document to support what Sonia said to mobilize votes in the national elections that followed after the presentation of the interim budget ! The other political leaders like Manmohan Singh, P. Chidambaram, S. M. Krishna etc seized the opportunity of quoting Sonia on different platforms. The erstwhile Deputy Chairman of the Planning Commission Montek Singh Aluwalia also agreed with what Sonia said though he admitted later in 201I that inclusive growth was a complex and complicated goal to accomplish. A disappointing realization with inordinate delay!

*(To be continued...)*

*Courtesy : Invited article published in Al-Shodhana, a peer reviewed Journal of St. Alosius College, Autonomous, Mangalore, Vol. 9 No 2, July 2021, Pg. No. 14*


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***


# ELECTION NOTICE

I have been nominated as Hon. Returning Officer and authorised to conduct the election of fourteen members to the Managing Committee for a term of two years in two lots. 1) For the term of 2020-2021 & 2021-2022 vacancies caused by retirement of seven members viz. Shri Shivkumar P. Bhagwat, Shri Sanjay Bhat, Shri R. N. Kameshwar, Shri A. K. Bhat, Dr. Vivek Hebbar, Shri N. K.Hegde & Smt. Tanuja Hegde. 2) For the term of 2021-2022 & 2022-2023 vacancies caused by retirement of seven members viz. Shri Narayan Akadas, Shri Umesh Hegde, Shri A. G. Bhat, Shri Gautam Upadhya, Shri Chidanand Bhagwat, Shri Ramesh Vaidya & Smt. Shashikala Hegde. However, they are eligible for re-election. The details are as follows -

1. Receiving the duly completed nomination forms upto 4.00 pm on 19th March 2022 at Havyaka Welfare Trust, Kalina Office.
2. Receiving written request of withdrawal latest by 4.00 pm on 21st March 2022 at HWT Office, Kalina.
3. Scrutiny of nomination forms, preparing the final list of candidates and displaying the same on the Notice Board of Havyaka Office, Kalina on 23rd March 2022.
4. Election to be held, if required, during the Annual General Body Meeting on 26th March 2022. Decision of the Hon. Returning Officer shall be final.
5. Declaration of Result of Election.
6. For the smooth conduct of the Election, the Returning Officer may take assistance / help of the volunteers.
7. Members are earnestly requested to co-operate in all the respects.
8. Nomination Forms are available at Kalina and Dombivli offices during office hours upto 4 pm. (Mon. - Sat.)

Place : Mumbai
Date : 1st March 2022

Sd/-
**Shri S. V. Shastri**
*Hon. Returning Officer*

# ಸಂಕ್ಷಿಪ್ತ ಸುದ್ದಿಗಳು

## ಮರಾಠಿ ಮಣ್ಣಿನಲ್ಲಿ ಡಾ। ಜಿ. ಎನ್. ಉಪಾಧ್ಯರ ಕನ್ನಡ ಸೇವೆ ಮಾದರಿ ಪ್ರತಿಷ್ಠಿತ ನರಹಳ್ಳಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಸ್ಟೀಸ್ ಬಿ. ಎನ್. ಶ್ರೀಕೃಷ್ಣ



ಡಾ। ಜಿ. ಎನ್. ಉಪಾಧ್ಯ ಅವರು ಪತ್ರಕರ್ತರಾಗಿ, ವಿಮರ್ಶಕರಾಗಿ, ಚಿಂತಕರಾಗಿ, ಪ್ರಾಧ್ಯಾಪಕರಾಗಿ ಹೆಸರು ಮಾಡಿದ್ದಾರೆ. 'ಕಾವೇರಿಯಿಂದ ಮಾ ಗೋದಾವರಿವರೆಮಿರ್ದ ನಾಡದಾ ಕನ್ನಡದೊಳ್' ಎಂಬ ಕವಿ ರಾಜಮಾರ್ಗಕಾರನ ಉಕ್ತಿಯಂತೆ ನಾನು, ಡಾ। ಉಪಾಧ್ಯ ಅವರು ಮಹಾರಾಷ್ಟ್ರ ರಾಜ್ಯದಲ್ಲಿದ್ದೂ ಹೊರನಾಡ ಕನ್ನಡಿಗರಲ್ಲ. ಗಡಿನಾಡ ಗೆರೆ ಎಳೆಯುವ ಕಾರಣ, ರಾಜಕಾರಣವಶಾತ್ ನಾವು ಹೊರನಾಡ ಕನ್ನಡಿಗರು ಎಂದು ಕರೆಸಿಕೊಳ್ಳುತ್ತಿದ್ದೇವೆ. ಮರಾಠಿ ಮಣ್ಣಿನಲ್ಲಿ ಕಸ್ತೂರಿಯ ಸೌರಭ ನಾಲ್ಕು ದಿಕ್ಕುಗಳಿಗೂ ಪಸರಿಸುತ್ತದೆ. 'ಕುರಿತೋದದೆಯುಂ ಕಾವ್ಯಪ್ರಯೋಗ ಮತಿಗಳ್' ಎಂದು ಕವಿರಾಜಮಾರ್ಗಕಾರ ಕನ್ನಡಿಗರನ್ನು ಕೊಂಡಾಡಿದ್ದಾನೆ. ಉಪಾಧ್ಯ ಅವರು ಓದಿದವರು, ಇತರರನ್ನು ಓದಿಸಿದವರು. ಕಾವ್ಯ ಪ್ರಯೋಗ, ಸಾಹಿತ್ಯ ಪ್ರಯೋಗ, ವಿಮರ್ಶೆ, ಸಂಸ್ಕೃತಿಯ ಪ್ರಚಾರ ಮಾಡುತ್ತಾ ಬಂದಿರುವವರು. ಇದರ ಜೊತೆಗೆ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವ ವಿಶೇಷ ಕಾರ್ಯ ಮಾಡುತ್ತಿದ್ದಾರೆ. ಅಧ್ಯಯನ, ಬೋಧನೆ, ಆಚಾರ ಹಾಗೂ ಅದರ ಪ್ರಚಾರ ಮಾಡುತ್ತಿರುವುದರಿಂದಲೇ ವಿದ್ಯಾರ್ಥಿ ವರ್ಗದ ವಿಶೇಷ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಜಸ್ಟೀಸ್ ಬಿ.ಎನ್. ಶ್ರೀಕೃಷ್ಣ ತಿಳಿಸಿದರು.

ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಕನ್ನಡ ಜನಶಕ್ತಿ ಕೇಂದ್ರ ಬೆಂಗಳೂರು, ನರಹಳ್ಳಿ ಪ್ರತಿಷ್ಠಾನ ಬೆಂಗಳೂರು ಮತ್ತು ಮೈಸೂರು ಅಸೋಸಿಯೇಶನ್ ಮುಂಬಯಿ ಇವರ ಆಶ್ರಯದಲ್ಲಿ ಫೆ. 6 ರಂದು ಪೂರ್ವಾಹ್ನ ನಡೆದ 2021ನೇ ಸಾಲಿನ ಡಾ। ನರಹಳ್ಳಿ ಪ್ರತಿಷ್ಠಾನ ಕೊಡಮಾಡುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಡಾ। ಜಿ.ಎನ್. ಉಪಾಧ್ಯ ಅವರು ಮಾಡುತ್ತಿರುವ ಕನ್ನಡದ ಸೇವೆ ಮಹತ್ತರವಾದುದು. ನಾಡು-ನುಡಿಯನ್ನು ಮರಾಠಿ ಮಣ್ಣಿನಲ್ಲಿ ಉಳಿಸಿ-ಬೆಳೆಸಲು ಕನ್ನಡ ವಿಭಾಗದ ಸೇವೆ ಶ್ಲಾಘನೀಯವಾಗಿದೆ ಎಂದು ತಿಳಿಸಿ ಡಾ। ಜಿ.ಎನ್. ಉಪಾಧ್ಯ ಅವರನ್ನು ಅಭಿನಂದಿಸಿ ಶುಭ ಹಾರೈಸಿದರು. ಸಮಾರಂಭದಲ್ಲಿ ಕನ್ನಡ ವಿಭಾಗ ಮುಂಬಯಿ ವಿ. ವಿ.ಯ ಮುಖ್ಯಸ್ಥ, ಸಂಶೋಧಕ, ಸಾಹಿತಿ, ಡಾ। ಜಿ.ಎನ್. ಉಪಾಧ್ಯ ಅವರಿಗೆ 2021ನೇ ಸಾಲಿನ ಪ್ರತಿಷ್ಠಿತ ನರಹಳ್ಳಿ ಪ್ರಶಸ್ತಿಯನ್ನು ಗಣ್ಯರ ಸಮ್ಮುಖದಲ್ಲಿ ಜಸ್ಟೀಸ್ ಬಿ.ಎನ್. ಶ್ರೀಕೃಷ್ಣ ಅವರು ಪ್ರದಾನ ಮಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕವಿ ಡಾ। ಎಚ್.ಎಸ್. ವೆಂಕಟೇಶಮೂರ್ತಿ ಮಾತನಾಡಿ, ಇಂದಿನ ಸಭೆ ಅನ್ಯೋನ್ಯ, ಪ್ರೀತಿಯ ಕೌಟುಂಬಿಕ ನೆಲೆಯಲ್ಲಿ ಆಗಿರುವುದು ಸಂತೋಷ ತಂದಿದೆ. ಎಂಟನೇ ವರ್ಷದ ನರಹಳ್ಳಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆದಿರುವುದು ಪ್ರತಿಷ್ಠಾನಕ್ಕೆ ಎಂಟನೇ ಕೋಡು ಬಂದಿದೆ. ಇಂದಿನ ಕಾರ್ಯಕ್ರಮ ವಿಶಿಷ್ಟವಾದದ್ದು ಎಂದು ಡಾ। ಜಿ. ಎನ್. ಉಪಾಧ್ಯರನ್ನು ಅಭಿನಂದಿಸಿದರು.

ನರಹಳ್ಳಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ। ಆನಂದರಾಮ ಉಪಾಧ್ಯ ಸ್ವಾಗತಿಸಿ, ನರಹಳ್ಳಿ ಪ್ರಶಸ್ತಿ ಪುರಸ್ಕೃತ ಡಾ। ಜಿ.ಎನ್. ಉಪಾಧ್ಯರ ಕುರಿತು ಅಭಿನಂದನಾ ನುಡಿಗಳನ್ನಾಡಿ, ಈ ಬಾರಿ ಸಂಶೋಧನೆ, ವಿಮರ್ಶೆ, ಕರ್ನಾಟಕದ ಹೊರನಾಡಿನಲ್ಲಿ ಇದ್ದುಕೊಂಡು ಸಾಹಿತ್ಯ ಸೇವೆ, ಸಂಸ್ಕೃತಿಯ ಚಿಂತನೆ, ಕನ್ನಡ ಕಟ್ಟುವ ಕೆಲಸ ಮಾಡುತ್ತಿರುವ ಡಾ। ಜಿ.ಎನ್. ಉಪಾಧ್ಯರಿಗೆ ನೀಡಿರುವುದರಿಂದ ಪ್ರಶಸ್ತಿಯ ಘನತೆ ಮತ್ತಷ್ಟು ಹೆಚ್ಚಿಸಿದೆ ಎಂದರು. ಸಮಾರಂಭದಲ್ಲಿ ಡಾ। ಉಪಾಧ್ಯ ಅವರ ಕುರಿತಾದ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು. ಮೈಸೂರು ಅಸೋಸಿಯೇಶನ್‌ನ ಟ್ರಸ್ಟಿ, ಸಂಘಟಕ ಮಂಜುನಾಥಯ್ಯ ಶುಭ ಹಾರೈಸಿದರು. ಮೈಸೂರು ಅಸೋಸಿಯೇಶನ್‌ನ ಟ್ರಸ್ಟಿ ರಂಗಕರ್ಮಿ ಡಾ। ಮಂಜುನಾಥ್, ಸಂಘಟಕ ಮಂಜುನಾಥಯ್ಯ, ಅಸೋಸಿಯೇಶನ್‌ನ ಕಾರ್ಯದರ್ಶಿ ಡಾ। ಗಣಪತಿ ಶಂಕರಲಿಂಗ ಉಪಸ್ಥಿತರಿದ್ದರು. ಐಲೇಸಾ ದಿ ವಾಯ್ಸ್ ಆಫ್ ಓಶಿಯನ್ ಇವರು ತಾಂತ್ರಿಕವಾಗಿ ಸಹಕರಿಸಿದರು. ಸಂಘಟಕ, ಲೇಖಕ ಪೇತ್ರಿ ವಿಶ್ವನಾಥ್ ಶೆಟ್ಟಿ, ಚಿತ್ರಕಲಾವಿದ ಜಯ ಸಾಲ್ಯಾನ್, ಕಲಾ ಭಾಗ್ವತ್ ಮೊದಲಾದವರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ನಳಿನಾ ಪ್ರಸಾದ್ ಗುರುಗಳನ್ನು ಕುರಿತ ಸ್ವರಚಿತ ಕವನ ವಾಚನ ಮಾಡಿದರು. ಝೂಮ್ ಮೂಲಕ ನಡೆದ ಈ ಕಾರ್ಯಕ್ರಮವನ್ನು ಮುಂಬಯಿ ವಿವಿ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ। ಪೂರ್ಣಿಮಾ ಸುಧಾಕರ ಶೆಟ್ಟಿ ನಿರೂಪಿಸಿದರು. ಮೈಸೂರು ಅಸೋಸಿಯೇಶನ್ ಕಾರ್ಯದರ್ಶಿ ಡಾ। ಗಣಪತಿ ಶಂಕರಲಿಂಗ ವಂದಿಸಿದರು.

## ಮುಂಬೈ ವಿವಿ ಕನ್ನಡ ವಿಭಾಗ, ಮೈಸೂರು ಅಸೋಸಿಯೇಶನ್ : ಸಾಂಸ್ಕೃತಿಕ ವೈವಿಧ್ಯ, ಕಲಾ ಭಾಗವತ್ ಅವರ ಜೀವಸ್ವರ (ಜಯಂತ ಕಾಯ್ಕಿಣಿ ಪ್ರಬಂಧ ಲೋಕ) ಕೃತಿ ಬಿಡುಗಡೆ

ಸಮಾಜದಲ್ಲಿ ನಾಮಾಂಕಿತ ವ್ಯಕ್ತಿಗಳ ಬಗ್ಗೆ ಕೃತಿ ರಚಿಸುವಾಗ ಉತ್ಪ್ರೇಕ್ಷೆ, ಆರಾಧನಾ ಪ್ರವೃತ್ತಿ ಸಲ್ಲದು. ಕಲಾ ಭಾಗ್ವತ್ ಅವರ ಕೃತಿಗಳು ಇದಕ್ಕೆ ಮಾದರಿಯಾಗಿದೆ. ಅವು ಕಲಾರವರ ನೇರವಾದ, ಸ್ಫುಟವಾದ ಸುಂದರ ಶೈಲಿಯಲ್ಲಿ, ಸರಳ ನಿರೂಪಣೆ ಹಾಗೂ ಉತ್ಪ್ರೇಕ್ಷೆಯಿಲ್ಲದ ಭಾಷೆಯಲ್ಲಿ ಸೊಗಸಾಗಿ ಮೂಡಿಬಂದಿವೆ. ಇದು ಅವರ ಬರವಣಿಗೆಯ ವಿಶೇಷತೆ ಎಂದು ಮುಂಬಯಿಯ ಬಿ.ಎ.ಆರ್.ಸಿ. ನಿವೃತ್ತ ವಿಜ್ಞಾನಿ ಹಾಗೂ ಸಾಹಿತಿ ಡಾ. ವ್ಯಾಸರಾವ್ ನಿಂಜೂರು ಅಭಿಪ್ರಾಯ ಪಟ್ಟರು. ಫೆ. 19 ರಂದು ಅವರು ಮುಂಬೈ ವಿಶ್ವವಿದ್ಯಾಲಯ, ಮೈಸೂರು ಅಸೋಸಿಯೇಶನ್ ಸಹಯೋಗದಲ್ಲಿ ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಆಯೋಜಿಸಲಾಗಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮುಂಬೈ ವಿ.ವಿ. ಕನ್ನಡ ವಿಭಾಗದ ವಿದ್ಯಾರ್ಥಿ, ಲೇಖಕಿ ಕಲಾ ಭಾಗ್ವತ್ ಅವರ ಎಂ.ಎ. ಸಂಪ್ರಬಂಧವಾದ ವೈದ್ಯ ಭೂಷಣ ಡಾ. ಬಿ.ಎಂ. ಹೆಗ್ಡೆ ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕನ್ನಡ ವಿಭಾಗದ ಎಂಭತ್ತೆರಡನೆಯ ಪ್ರಕಟಣೆಯಾದ 'ಜೀವಸ್ವರ' (ಜಯಂತ ಕಾಯ್ಕಿಣಿ ಪ್ರಬಂಧ ಲೋಕ) ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಮುಂಬೈ ವಿವಿ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ. ಜಿ. ಎನ್. ಉಪಾಧ್ಯ ಅವರು ಮಾತನಾಡಿ ಜಯಂತರ ಪ್ರಬಂಧಗಳ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿದಿರುವ ಈ ಸಂಪ್ರಬಂಧ ಕಲಾ ಭಾಗ್ವತ್ ಅವರ ವ್ಯಾಪಕ ಓದು ಅಧ್ಯಯನವನ್ನು ಬಿಂಬಿಸುತ್ತದೆ. ಸಂಕ್ಷಿಪ್ತವಾಗಿ, ಅರ್ಥಪೂರ್ಣವಾಗಿ, ಕಾವ್ಯಾತ್ಮಕವಾಗಿ ಬರೆಯುವ ಕಲೆ ಅವರಿಗೆ ಒಲಿದಿದೆ. ನೂರು ಕಾಲ ಇರಬಹುದಾದ ಉತ್ತಮ ಕೃತಿಯಿದು ಎಂದು ಕೃತಿಕಾರರನ್ನು ಅಭಿನಂದಿಸಿದರು. ಜಯಂತರು ಮುಂಬೈ ಕನ್ನಡಿಗರ ಮಹಾನ್ ಚೇತನ. ದೂರದ ಬೆಂಗಳೂರಿನಲ್ಲಿ ಇದ್ದುಕೊಂಡು ನಮ್ಮ ಬೆನ್ನು ತಟ್ಟುವ ಅವರು ಕಾಲಕಾಲಕ್ಕೆ ಆನ್‌ಲೈನ್ ಮುಖಾಂತರವೂ ವಿಭಾಗದಲ್ಲಿ ಉಪನ್ಯಾಸ ನೀಡಿರುತ್ತಾರೆ. ಇಂತಹ ಸ್ವೋಪಜ್ಞ ಲೇಖಕ ನಮ್ಮೊಂದಿಗೆ ಉಪಸ್ಥಿತರಿರುವುದು ನಮ್ಮ ಭಾಗ್ಯ. ಜಯಂತರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಅವರಿಗೆ ಅದು ಆದಷ್ಟು ಬೇಗ ಸಿಗಲಿ ಎಂದು ಹಾರೈಸಿದರು. ವರ್ತಮಾನದಲ್ಲಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಕೆಲಸವಾಗಬೇಕು. ಅದರಿಂದ ಲೇಖಕರಿಗೆ, ಪ್ರಕಾಶಕರಿಗೆ ಹುಮ್ಮಸ್ಸು ಬರುವುದು. ಕೃತಿಗಳನ್ನು ಕೊಂಡು ಓದಬೇಕು. ಪುಷ್ಪಗುಚ್ಛಗಳ ಬದಲಾಗಿ ಬಾಡದ ಹೂವುಗಳಾದ ಪುಸ್ತಕಗಳನ್ನು ಮಿತ್ರರಿಗೆ ಕೊಡುವುದು ರೂಢಿಯಲ್ಲಿ ಬರಬೇಕು ಎಂದು ವಿನಂತಿಸಿದರು.

ವಿಶೇಷವಾಗಿ ಆಮಂತ್ರಿತರಾದ ಜನಪ್ರಿಯ ಸಾಹಿತಿ, ಖ್ಯಾತ ಕವಿ ಜಯಂತ ಕಾಯ್ಕಿಣಿ ಅವರು ಬರವಣಿಗೆ ಕುರಿತು ವಿಶ್ಲೇಷಿಸುತ್ತಾ ನಾವು ನಮ್ಮ ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ನಮ್ಮ ಅನುಭವಗಳನ್ನು ಬರೆಯುವುದು, ಬರಹಗಾರನಿಗೆ ಬರೆಯುವಾಗ ಸಿಗುವ ತೃಪ್ತಿ, ಆನಂದವೇ ಅವನಿಗೆ ಪ್ರಶಸ್ತಿ. ಅದಕ್ಕಿಂತ ಮಿಗಿಲಾದುದು ಏನೂ ಇಲ್ಲ. ಹೊಸದಾಗಿ ಬರೆದಾಗ ಅದು ಏನೋ ವಿಶೇಷ ಸುಖವನ್ನು ಕೊಡುತ್ತದೆ. ಚೆನ್ನಾಗಿ ಬರೆಯಲು ತೀವ್ರವಾಗಿ ಬದುಕಬೇಕು. ಅದೇ ನಮ್ಮ ಬರವಣಿಗೆಯಲ್ಲಿ ಬರುತ್ತದೆ. ಅನಿರ್ವಚನೀಯವಾದುದನ್ನು ನಮ್ಮ ಬರವಣಿಗೆಯ ಮೂಲಕ ಧ್ವನಿಸಲು ಸಾಧ್ಯವಾದರೆ ಅದೇ ಕಾವ್ಯ. ಬರಹಗಾರನಾದವನು ಹೆಚ್ಚು ಹೆಚ್ಚು ಒಳ್ಳೆಯ ಕೃತಿಗಳನ್ನು ಓದಬೇಕು. ನಾವು ಓದಿದಾಗ ಮಾತ್ರ ಉತ್ತಮ ವಾದದ್ದನ್ನು ಬರೆಯಲಿಕ್ಕಾಗುತ್ತದೆ. ನಮಗೆ ಓದಿನ ರುಚಿ ಹತ್ತಿಸುವ ಕೆಲಸವನ್ನು ತುಷಾರ, ಮಯೂರದಂತಹ ಪತ್ರಿಕೆಗಳು ಮಾಡಿವೆ ಎಂದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮುಂಬಯಿಯ ಆಧ್ಯಾತ್ಮಿಕತೆ ನನ್ನನ್ನು ಸೆಳೆಯುತ್ತದೆ. ಇಲ್ಲಿ ಬಂದಾಗ ಒಂದು ರೀತಿಯ ಪುನಶ್ಚೇತನ ದೊರೆತಂತಾಗುತ್ತದೆ. ಸಂಬಂಧಗಳನ್ನು ಆಗಾಗ ಮುಟ್ಟಿ ನೋಡಬೇಕಾಗುತ್ತದೆ. ಈ ಕಾರ್ಯಕ್ರಮದ ನೆಪದಲ್ಲಿ ಎಲ್ಲರನ್ನೂ ಒಮ್ಮೆ ಮುಟ್ಟಿ ನೋಡಲು ಮುಂಬಯಿಗೆ ಬಂದಿರುವೆ ಎನ್ನುತ್ತಾ ಮುಂಬೈ ಕುರಿತ ಕೆಲವು ನೆನಪುಗಳನ್ನು ಮೆಲುಕು ಹಾಕಿದರು. ಕಲಾ ಭಾಗ್ವತ್ ಅವರು ಪ್ರಾಮಾಣಿಕವಾಗಿ ಕೃತಿ ರಚನೆಯ ಕೆಲಸವನ್ನು ಮಾಡಿದ್ದಾರೆ. ಅವರು ಪಟ್ಟ ಚಡಪಡಿಕೆ ನನ್ನನ್ನು ತಲುಪಿದೆ. ಯಾರು ಅವಿಶ್ರಾಂತವಾಗಿ ಬರೆಯುತ್ತಾರೋ ಅಂತಹವರು ಚೆನ್ನಾಗಿ ಬರೆಯುತ್ತಾರೆ. ಅವರ ಈ ಕೃತಿ ರಚನೆ ನನಗೆ ಖುಷಿಯನ್ನು ನೀಡಿದೆ. ಇದು 'ಹೊಸ ತಲೆಮಾರಿನ ಹೊಸ ಕಿಟಿಕಿ ಬಾಗಿಲು ತೆರೆದಂತಿದೆ' ಎಂದು ಕೃತಿಕಾರರನ್ನು ಶ್ಲಾಘಿಸಿದರು. ಕೃತಿ ರಚನೆಯಲ್ಲಿ ಮಾರ್ಗದರ್ಶಕರಾದ ಡಾ. ಜಿ. ಎನ್. ಉಪಾಧ್ಯ ಅವರು ಹಲವು ಕಾರ್ಯಕ್ರಮಗಳನ್ನು

## STATEMENT PARTICULARS ABOUT "HAVYAKA SANDESHA"

### FORM IV

| | | | |
|---|---|---|---|
| 1. | Place of Publication | : | Mumbai |
| 2. | Periodicity | : | Monthly |
| 3. | Date of Publication | : | 1st of every month |
| 4. | Price | : | Rupee 2/- per issue |
| 5. | Printer's Name | : | **Narayan Akadas R.** |
| | Whether Citizen of India | : | Yes |
| | Address | : | B-207, Valmiki Apts., Near Pharmacy College,Sundar Nagar, Kalina, Vidyanagari P. O. Mumbai - 400 098. ✆ 2665 2591 |
| 6. | Publisher's Name | : | **Narayan Akadas R.** |
| | Whether Citizen of India | : | Yes |
| | Address | : | B-207, Valmiki Apts., Near Pharmacy College,Sundar Nagar, Kalina, Vidyanagari P. O. Mumbai - 400 098. ✆ 2665 2591 |
| 7. | Editor's Name | : | **Smt. Amita S. Bhagwat** |
| | Whether Citizen of India | : | Yes |
| | Address | : | B-207, Valmiki Apts., Near Pharmacy College,Sundar Nagar, Kalina, Vidyanagari P. O. Mumbai - 400 098. ✆ 2665 2591 |
| 8. | Name & Address of Owners | : | "Havyaka Welfare Trust" B-207, Valmiki Apts., Near Pharmacy College, Sundar Nagar, Kalina, Vidyanagari P. O. Mumbai - 400 098. ✆ 2665 2591 |

I, Narayan Akadas R., hereby declare that the particulars given above are true to the best of my knowledge & belief.

Sd/-
**Narayan Akadas R.**
*Signature of the Publisher*

Mumbai
Date : 1-3-2022

*PAGE DONATED BY : **SHRI A. K. BHAT, CHITRIGI & FAMILY***



ವ್ಯವಸ್ಥಿತವಾಗಿ ಆಯೋಜಿಸುತ್ತಾ ಮುಂಬೈಯನ್ನು ಕನ್ನಡದ ಕಂಪನ ಕೇಂದ್ರವನ್ನಾಗಿ ಮಾಡಿದ್ದಾರೆ ಎನ್ನುತ್ತಾ ಅವರ ಚಟುವಟಿಕೆ, ಕ್ರಿಯಾಶೀಲತೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಹತ್ವದ ಅಂಶಗಳನ್ನು ಹಾಸ್ಯ ಚಟಾಕಿಗಳೊಂದಿಗೆ ಹೇಳುವ ಮೂಲಕ ಸಭಿಕರನ್ನು ರಂಜಿಸಿದರು.

ಬಿಡುಗಡೆಯಾದ ಎರಡು ಕೃತಿಗಳ ಲೇಖಕರಾದ ಶ್ರೀಮತಿ ಕಲಾ ಚಿದಾನಂದ ಭಾಗ್ವತ್ ಅವರು ಮಾತನಾಡಿ ಜಯಂತರ ಸಾಹಿತ್ಯದಿಂದ ನನಗೆ ದೊರೆತದ್ದು ಬೆಟ್ಟದಷ್ಟು. ನಾನು ಮಾಡಿದ್ದು ಬಿಂದುವಿನಷ್ಟು. ಜೀವನದಲ್ಲಿ ಕಲಿಕೆ ನಿರಂತರ, ಅನುಭವವೂ ನಿರಂತರ. ಕಲಿತದ್ದನ್ನು ನಮ್ಮ ಜೀವನದ ಅಂಗವನ್ನಾಗಿ ಅಳವಡಿಸಿಕೊಳ್ಳುವುದೂ ಮುಖ್ಯ. ಸಿಕ್ಕಿದ ಸಮಯದಲ್ಲಿ ಏನಾದರೂ ಹೊಸತನ್ನು ಮಾಡಬೇಕು ಎಂಬ ತಂದೆ ತಾಯಿಯರ ಗುಣ ನನಗೆ ಬಂದಿದೆ. ಸಾಹಿತ್ಯದ ಸೀಮಿತ ಪರಿಧಿಯೊಳಗೆ ಇದ್ದ ನನಗೆ ಎಂ.ಎ. ಓದು ಅಧ್ಯಯನದಿಂದ ಬಹಳಷ್ಟು ವಿಷಯಗಳ ಬಂಪರ್ ಲಾಟರಿ ಸಿಕ್ಕ ಹಾಗೆ ಆಗಿದೆ. ಅದು ಆಸಕ್ತಿ ಹಾಗೂ ಪರಿಶ್ರಮದಿಂದ ಸಿಕ್ಕ ಸಂಪತ್ತು. ಮುಂದೆ ಪ್ರಬಂಧಗಳ ಅಧ್ಯಯನ ಮಾಡುವವರಿಗೆ ಪೀಠಿಕೆ ರೂಪದಲ್ಲಿ ಈ ಕೃತಿ ಉಪಯೋಗವಾಗಲಿ ಎಂದು ಸ್ನಾತಕೋತ್ತರ ಅಧ್ಯಯನ ಹಾಗೂ ಕೃತಿ ರಚನೆ ಸಂದರ್ಭದ ಅನೇಕ ಅನುಭವ, ಅನಿಸಿಕೆಗಳನ್ನು ಹಂಚಿಕೊಂಡರು. ವೈದ್ಯಭೂಷಣ ಡಾ. ಬಿ.ಎಂ. ಹೆಗ್ಡೆ ಕೃತಿ ಕುರಿತು ಲೇಖಕಿ ಶಶಿಕಲಾ ಹೆಗಡೆಯವರು ಮಾತನಾಡಿ ತಮ್ಮ ಜೀವನದುದ್ದಕ್ಕೂ ಧೈರ್ಯ, ಸಾಹಸ ಬೆಳೆಸಿಕೊಂಡ ಡಾ. ಬಿ.ಎಂ. ಹೆಗ್ಡೆ ಅವರ ಕುರಿತ ಕೃತಿ ರಚನೆ ಮಾಡಿದ ಕಲಾ ಭಾಗ್ವತ್ ಅವರು ಅಭಿನಂದನಾರ್ಹರು. ಅವರ ಬಾಲ್ಯ, ವಿದ್ಯಾಭ್ಯಾಸ, ಉನ್ನತ ವ್ಯಾಸಂಗ ಮಹತ್ತರವಾದ ಹೆಜ್ಜೆ ಗುರುತುಗಳನ್ನು ಕಲಾ ಈ ಕೃತಿಯಲ್ಲಿ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಈ ಕೃತಿ ಮನೆಮದ್ದುಗಳ ಭಂಡಾರ ಎಂದರು. 'ಜೀವಸ್ವರ' (ಜಯಂತ ಕಾಯ್ಕಿಣಿ ಪ್ರಬಂಧಲೋಕ) ಕೃತಿಯ ಕುರಿತು ಮಾತನಾಡಿದ ರಂಗಕಲಾವಿದರಾದ ಅಹಲ್ಯಾ ಬಲ್ಲಾಳ್ ಅವರು, ಕೃತಿಯ ಕೆಲವು ಸಾಲುಗಳನ್ನು ಉಲ್ಲೇಖಿಸುತ್ತಾ ಕೃತಿಕಾರರು ವ್ಯವಸ್ಥಿತ ರೂಪದ ಅಧ್ಯಯನ ಮಾಡಿ ಜಯಂತರ ಪ್ರಬಂಧಗಳ ಆಳ, ಅಗಲ, ವೈಭವಗಳನ್ನು ಬೆಳಕಿಗೆ ಹಿಡಿದಿರುವುದಷ್ಟೇ ಅಲ್ಲ, ಪ್ರೌಢ ಅಭ್ಯಾಸದಿಂದ ತಮ್ಮದೇ ಆದ ಪರಾಮರ್ಶೆ ನಡೆಸಿದ್ದಾರೆ. ಕಲಾ ಅವರ ಶ್ರದ್ಧೆ, ಸಂಕಲ್ಪ ಬಲ, ಆಸ್ಥೆಗೆ ಶರಣು, ಅವರ ಮುಂದಿನ ಅಧ್ಯಯನದ ಬಗ್ಗೆ ನಾನು ಕುತೂಹಲಿಯಾಗಿದ್ದೇನೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಂಗವಾಗಿ ಕಾವ್ಯಾ ಭಾಗ್ವತ್ ಹಾಗೂ ಶ್ರಾವ್ಯ ಲಹರಿ ರಾವ್ ಅವರಿಂದ ನಡೆದ ಗೀತಗುಂಜನ ಕಾರ್ಯಕ್ರಮ ಹಾಗೂ ಆಶೀಷ್ ಭಾಗ್ವತ್ ಅವರ ತಬಲಾ ವಾದನ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ನೀಡಿತು. ಕೃತಿಕಾರರಾದ ಕಲಾ ಭಾಗ್ವತ್ ಅವರು ಡಾ. ವ್ಯಾಸರಾವ್ ನಿಂಜೂರು, ಸಾಹಿತಿ ಜಯಂತ ಕಾಯ್ಕಿಣಿ, ಡಾ. ಜಿ.ಎನ್. ಉಪಾಧ್ಯ, ಪ್ರೊ. ಗಣಪತಿ ಶಂಕರಲಿಂಗ ಹಾಗೂ ಡಾ. ಪೂರ್ಣಿಮಾ ಶೆಟ್ಟಿಯವರಿಗೆ ಶಾಲು ಹೊದೆಸಿ, ಫಲಗೌರವ ನೀಡಿ ಸನ್ಮಾನಿಸಿದರು.




ಈ ಸಂದರ್ಭದಲ್ಲಿ ಮುಂಬೈ ವಿ.ವಿ. ಕನ್ನಡ ವಿಭಾಗದ ವತಿಯಿಂದ ಕಲಾ ಭಾಗ್ವತ್ ಅವರನ್ನು ಕೃತಿಯ ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದ ಜಯ ಎಂ. ಸಾಲ್ಯಾನ್ ಹಾಗೂ ಪುಟ ವಿನ್ಯಾಸದಲ್ಲಿ ಸಹಕರಿಸಿದ ಸವಿತಾ ಶೆಟ್ಟಿ ಅವರನ್ನು ಗೌರವಿಸಲಾಯಿತು. ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿಯವರು ಸಂಪೂರ್ಣ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.



ಸವಿತಾ ಅರುಣ್ ಶೆಟ್ಟಿ ವಂದನಾರ್ಪಣೆ ಗೈದರು. ಜಯ ಸಾಲ್ಯಾನ್, ಪ್ರತಿಭಾ ರಾವ್ ಹಾಗೂ ವಿಭಾಗದ ವಿದ್ಯಾರ್ಥಿಗಳು ಸಹಕರಿಸಿದರು. ನಾಡಿನ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## Achievement



**Mr, Raghuveer H. S.** S/o. Smt. Shakuntala and Shri Shankar Bhat passed in CA examination.

Currently he is working in R. S. M. Astute Consulting Pvt. Ltd. Bengaluru as Assistant Manager, (Audits)

★ ★ ★



**Mr. Advait** S/o. Smt. Sudha and Shri Ramesh Vaidya passed CA exam held in December 2021 and has become a Chartered Accountant

★ ★ ★



**Mr. Akshay** S/o. Smt. Sulekha and Shri Ganesh S. Bhat, Mulund has passed CA exam and has become a Chartered Accountant.

★ ★ ★

***We congratulate them and wish them a bright future.***

*PAGE DONATED BY :* ***SMT. SHANTA V. HEGDE, CARMICHAEL ROAD***

***RNI NO. MAHBIL / 2000 / 746,***
***Postal R.NO. MCN/161/2021-2023***
***WPP License No. MR / Tech / WPP-130 / North / 2021-2023***
***'Licence to post without prepayment'***

| | |
|---|---|
| ***Posted at Mumbai Patrika Channel Stg. Office Mumbai - 400 001***<br>**Date of Publication : 1st of every month** **REGISTERED NEWSPAPER** | **Date of Posting :**<br>**2nd, 3rd of every month** |
| ***If undelivered, please return to :***<br>**HAVYAKA WELFARE TRUST**<br>B-207, Valmiki Apts., Near Pharmacy College,<br>Sundar Nagar, Kalina, Vidyanagari P. O.,<br>Mumbai - 400 098. ✆ 2665 2591<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Narayan Akadas R.<br>for Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | **To,** |



## Donation

Received a donation of Rs. 5,00,000/- from Smt. Veena and Shri. Subray Hosmane towards Women Welfare Cell, on the happy occasion of the marriage of their daughter Chi. Sau. Suma with Chi. Jitendra (son of Smt. Savita and Shri. Mrityunjaya Bhat Hire) at Gokarn on 24th December, 2021.

***We congratulate them and wish the newly wed a Happy Married Life.***

